ಕಲ್ಯಾಣ ಕಿರಣ

ಏಪ್ರಿಲ್-2009

ಬೆಲೆ-ರೂ.10/-



ವಿಶ್ವಗುರು ಬಸವಣ್ಣನವರ 876ನೆಯ

ಜಯಂತಿ ಉತ್ಸವದ ಶುಭಾಶಯಗಳು



ಅಲ್ಲಮಗಿರಿಯಲ್ಲಿ ನಡೆದ ಲಿಂಗಾಯತ ಗಣಮೇಳವನ್ನು ಉದ್ಘಾಟಿಸುತ್ತಿರುವ ಶರಣ ಅನೀಲ ಕಾನಡೆ ಮತ್ತು ಅತಿಥಿಗಳು









ಅಲ್ಲಮಪ್ರಭು ಯೋಗಪೀಠವನಲಂಕರಿಸಿದ ಜಗದ್ಗುರು ಬಸವಕುಮಾರ ಸ್ವಾಮೀಜಿಯವರಿಗೆ ಶರಣ ಶರಣೆಯರು ಮತ್ತು ಪೂಜ್ಯರಿಂದ ಆರತಿ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-39 ಬಸವ ಶಕೆ-875-876 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-4 ಏಪ್ರಿಲ್- 2009 ವಾರ್ಷಿಕ ಚಂದಾ 100/- ರೂ.

ಸೂತ್ರಧಾರಿ - ರಕ್ಷಕ

ಬಸವ ನಿನ್ನ ಒಲುಮೆಯನ್ನು ಹೇಗೆ ನಾನು ಸ್ಮರಿಸಲಿ ?
ಯಶದಿಂದ ಮರುಜನ್ಮವೆಮಗೆ ನೀನು ಇತ್ತೆಯೌ ॥ ಪ ॥

ಬಿರುಗಾಳಿ ಬೀಸುತಿರಲು, ಮುಸಲಧಾರೆ ಸುರಿಯುತಿರಲು
ಬರಸಿಡಿಲು ಎರಗಿ ಬರಲು ಪಾರು ಮಾಡಿ ಉಳಿಸುತ
ಕರುಣ ಕವಚ ನಿರುತ ಹೊದಿಸಿ ಎಮ್ಮ ಕಾಯ್ದು ರಕ್ಷಿಸಿದ
ಕರುಣೆ ನಿನ್ನ ಪ್ರೇಮವನ್ನು ಹೇಗೆ ನಾನು ಸ್ಮರಿಸಲಿ ? ॥ 1 ॥

ಗೆಪ್ಪೆ ಆಲಿಯ ರಕ್ಷಿಸುವ್ಹೋಲ್ ಚಿಪ್ಪು ಮೆದುಳ ಕಾಯುವವ್ಹೊಲು
ಎದೆಯ ಗೂಡು ಹೃದಯ ಕಾಯ್ವ ತೆರದಿ ಎಮ್ಮ ರಕ್ಷಿಪೆ
ಎಡರು ಎನಿತು ಬಂದರೂ, ತೊಡರು ಎನಿತು ಸಂದರೂ
ತಾಯಿ ಗರ್ಭದಲ್ಲಿ ಶಿಶುವ ಇಟ್ಟು ಕಾಯುವಂತೆ ಕಾಯ್ವೆ ॥ 2 ॥

ಕೋಲ ತುದಿಯ ಕೋಡಗದೋಲ್ ನೇಣ ತುದಿಯ ಬೊಂಬೆಯವ್ಹೋಲ್
ಒಲವಿನಿಂದ ನೀನು ಕುಣಿಸೆ ಕುಣಿವ ಬೊಂಬೆಯಂತೆ ನಾವು
ವೀಣೆ ಹಿಡಿದ ವೈಣಿಕ ನೀ, ನಿನ್ನ ಕೈಯ ವೀಣೆಯಾವು
ಜ್ಞಾನ ನಾದಯೋಗಿ ನೀನು ನುಡಿಪ ಹೊಣೆಯು ನಿನ್ನದೈ ॥ 4 ॥

ವಿಶ್ವದ ಬಾನಿನಲ್ಲಿ ಬಾಳ ಗಾಳಿ ಪಟವ ಬಿಟ್ಟು
ವಿಶ್ವಾಸದ ಬಾಲಗೋಸಿ ಪವನಪಟಕೆ ಸೇರಿಸಿಟ್ಟು
ಕರುಣೆಯಿಂದ ಸೂತ್ರವನ್ನು ಭದ್ರವಾಗಿ ಕೈಯಲ್ಲಿಟ್ಟು
ನಿರುತ ಕಾವ ಗುರುವು ನೀನು ಸಚ್ಚಿದಾನಂದ ರೂಪನೆ ॥ 5 ॥

- ಮಾತಾಜಿ

876ನೆಯ ಬಸವ ಜಯಂತಿಯ ಶುಭಾಶಯಗಳು

ಶಿವ(ಸೋಮ)ವಾರ ದಿ.27-4-2009ರಂದು 876ನೆಯ ಬಸವ ಜಯಂತಿಯು ಒದಗಿ ಬಂದಿದ್ದು ಲಿಂಗಾಯತ ಧರ್ಮೀಯರ ಹೊಸ ವರ್ಷದ ಶುಭಾಶಯಗಳು. ಸೃಷ್ಟಿಕರ್ತ ಲಿಂಗದೇವ ಧರ್ಮಕರ್ತ ಬಸವಣ್ಣನವರ ಅನುಗ್ರಹದಿಂದ ಕಲ್ಯಾಣ ಕಿರಣದ ಓದುಗರೆಲ್ಲರಿಗೂ ಆಯುಷ್ಯ, ಆರೋಗ್ಯ, ಭಾಗ್ಯ ಸಕಲ ಸಂಪದವು ಪ್ರಾಪ್ತಿಯಾಗಲೆಂದು ಹಾರೈಸುತ್ತೇವೆ.

ವಿಶೇಷ ಸೂಚನೆ :

ಬೇರೆ ಬೇರೆ ಪಂಚಾಂಗಗಳಲ್ಲಿ ಬಸವ ಜಯಂತಿ 27, 28ಎಂದು ಪ್ರಕಟಿಸಲಾಗಿದೆ. ಕರ್ನಾಟಕ ಸರ್ಕಾರವು ರಜೆಯನ್ನು ದಿ.27ರಂದು ಕೊಟ್ಟ ಕಾರಣ ಅಂದೇ ಬಸವ ಜಯಂತಿ ಉತ್ಸವ ಆಚರಿಸಬೇಕೆಂದು ಸೂಚಿಸುತ್ತೇವೆ.

ಬೆಂಗಳೂರು ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮ

ದಿ.27-4-2009ರ ಶಿವ(ಸೋಮ)ವಾರದಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬಸವ ಜಯಂತಿಯ ವಿಶೇಷ ಕಾರ್ಯಕ್ರಮವನ್ನು ಬೆಳಿಗ್ಗೆ 10-30ರಿಂದ ಇಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಿ ಜ್ಞಾನ ಪ್ರಸಾದ, ಅನ್ನಪ್ರಸಾದಗಳೆರಡನ್ನೂ ಸ್ವೀಕರಿಸಿ ಪುನೀತರಾಗಬೇಕೆಂದು ಕೋರಿಕೆ.

ಕಿರಣಗನ್ನಡಿ

ಯುಗದ ಉತ್ಸಾಹವ ನೋಡಿರೆ !

ಪಂಚ ಶಕ್ತಿಗಳಿಗೆ ಪಂಚ ಪ್ರಧಾನರು
ಅವರ ಆಗುಹೋಗನಾ ಶರಣನೆ ಬಲ್ಲ
ಆ ಶರಣನು ತಾನು ತಾನಾಗಿ ಆರುದರ್ಶನಕ್ಕೆ ಯಾಚಕನಲ್ಲ
ಮೂರು ದರುಶನಕ್ಕೆ ಮುಯ್ಯಾನುವನಲ್ಲ
ವೇದ ಶಾಸ್ತ್ರಾಗಮ ಪುರಾಣ ಛಂದಸ್ಸು
ನಿಘಂಟುಗಳೆಂಬವಕ್ಕೆ ಭೇದಕನಲ್ಲ, ಅದೆಂತೆಂದಡೆ :
ಅವರಂಗದ ಮೇಲೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪ್ರಸಾದವಿಲ್ಲ ಪಾದೋದಕವಿಲ್ಲದ ಭಾಷೆ .
ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಏಕಾರ್ಥವಾದ ಕಾರಣ
ಪ್ರಾಣಿಗಳೆಲ್ಲವು ಪ್ರಣಾಮಂಗೈಯ್ಯುತ್ತಿದ್ದವು.
ಜೀವಿಗಳೆಲ್ಲವೂ ಜಯಾ ಜೀಯಾ ಎನ್ನುತ್ತಿದ್ದವು.
ಆತ್ಮಂಗಳೆಲ್ಲಾ ಅನುವ ಬೇಡುತ್ತಿದ್ದವು.
ಗುಹೇಶ್ವರಾ, ಸಂಗನ ಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯಾ ಜೀಯಾ ಎನುತ್ತಿದ್ದವು.

(ವ್ಯಾಖ್ಯಾನ 9ನೆಯ ಪುಟದಲ್ಲಿ)

KALYANA KIRANA-Reg No.19988/70. Monthly Magazine
Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9620058492

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010



ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ತಮಿಳು ನಾಡು ರಾಜ್ಯದ ರಾಜಧಾನಿ ಚೆನ್ನೈನಲ್ಲಿ ಲಿಂಗಾಯತ ಧರ್ಮದ ಒಂಬತ್ತನೆಯ ಸಮ್ಮೇಳನ

2009, ಮೇ 2, 3 ಮತ್ತು 4ರಂದು

ಬಸವ ಧರ್ಮ ಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2009ನೇ ಇಸವಿಯ ಮೇ 2,3 ಮತ್ತು 4ರಂದು ಲಿಂಗಾಯತ ಧರ್ಮದ ಒಂಬತ್ತನೆಯ ಸಮ್ಮೇಳನವನ್ನು ತಮಿಳು ನಾಡು ರಾಜ್ಯದ ರಾಜಧಾನಿ ಚೆನ್ನೈದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮೊಟ್ಟ ಮೊದಲನೆಯ ಸಮ್ಮೇಳನವು 1993ರಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ ಜರುಗಿತು. ನಂತರ ಕ್ರಮವಾಗಿ ಹೈದರಾಬಾದ್ (1994), ಬೆಂಗಳೂರು, ಇಚಲ ಕರಂಜಿ, ನವ ದೆಹಲಿ, ಗೋಕಾಕ್, ಮುಂಬಯಿಯ ಮಹಾನಗರದಲ್ಲಿ ಸಮ್ಮೇಳನಗಳು ಜರುಗಿದವು. 1997ರಲ್ಲಿ ಭಾರತದ ಹೆಮ್ಮೆಯ ರಾಜಧಾನಿ ನವದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ, 2005ರಲ್ಲಿ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಇರುವ ದರಿಯಾಗಂಜ್‌ನ ಮಹಾವೀರ ವಾಟಿಕಾದಲ್ಲಿ ಜರುಗಿತು. 2007ರಲ್ಲಿ ಮಹಾವೀರ್ ಎನ್‌ಕ್ಲೇವ್, ಪಾಲಮ್‌ದ ಎಂ.ಸಿ.ಡಿ. ಭವನದ ಸಮೀಪದ ಮೈದಾನದಲ್ಲಿ ಜರುಗಿತು. ಇದೀಗ ಒಂಬತ್ತನೆಯ ಸಮ್ಮೇಳನವನ್ನು ತಮಿಳುನಾಡಿನ ರಾಜಧಾನಿ ಚೆನ್ನೈ ಪಟ್ಟಣದಲ್ಲಿ 2009ರ ಮೇ 2, 3 ಮತ್ತು 4 ಶರಣ(ಶನಿ)ವಾರ, ದೇವ(ಭಾನು)ವಾರ ಮತ್ತು ಶಿವ(ಸೋಮ)ವಾರ ದಂದು ಸಂಯೋಜಿಸಲಾಗಿದೆ.

ಸಮ್ಮೇಳನ ಸ್ಥಳ : ಚೆನ್ನೈ ನಗರದ ಹೃದಯ ಭಾಗದಲ್ಲಿರುವ ತ್ಯಾಗರಾಜ ನಗರ (ಟಿ.ನಗರ ಎಂಬುದು ಸಂಕ್ಷಿಪ್ತ ರೂಪ)ದ ಹಿಂದಿ ಪ್ರಚಾರ ಸಭಾದ ಗಾಂಧಿ ಕಾನ್ವೊಕೇಷನ್ ಹಾಲ್.

ವಿಶ್ವಗುರು ಬಸವಣ್ಣನವರು (1134 -1196) ಭಾರತದ ಮೊಟ್ಟ ಮೊದಲ ಸಮತಾವಾದಿ, ಸಮಾಜ ಸುಧಾರಕರು. ಅವರ ದಿವ್ಯ ಸಂದೇಶಗಳು ಎಲ್ಲ ರಾಜ್ಯಗಳಲ್ಲಿ, ಎಲ್ಲ ಭಾಷೆಗಳಲ್ಲಿ ಪ್ರಚಾರವಾಗುವುದು ಅತ್ಯಂತ ಅವಶ್ಯಕವಾಗಿದೆ. ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಲಿಂಗಾಯತ ಧರ್ಮವು ಅತ್ಯಂತ ಪ್ರಗತಿಪರ ವಿಚಾರಗಳಿಂದ ಕೂಡಿದ ರಾಷ್ಟ್ರಧರ್ಮವಾಗಿದೆ. ಇದನ್ನು ಅನುಸರಿಸುವ ಲಿಂಗಾಯತ ಧರ್ಮ ಬಾಂಧವರು ದೇಶದಲ್ಲಿ ಎಲ್ಲೆಡೆ ಚದುರಿದಂತೆ ನೆಲೆಸಿದ್ದಾರೆ. ಲಿಂಗಾಯತ ಸಮಾಜದ ಸಂಘಟನೆ ಮತ್ತು ಬಸವ ತತ್ವ ಪ್ರಚಾರದ ದೃಷ್ಟಿಯಿಂದ ಪ್ರಸುತ್ತ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

ಪ್ರತಿನಿಧಿ ಶುಲ್ಕ ಒಬ್ಬರಿಗೆ 800ರೂಗಳು. ಮೇ 1ರ ಮಧ್ಯಾಹ್ನದಿಂದ ಮೇ4 ರ ಮಧ್ಯಾಹ್ನದ ವರೆಗೆ ಊಟ ಮತ್ತು ವಸತಿಯ ಜವಾಬ್ದಾರಿ ಸಮ್ಮೇಳನ ಸಮಿತಿಯದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

1. ಚೆನ್ನೈನಲ್ಲಿ ಸಂದರ್ಶನೀಯ ಸ್ಥಳಗಳು ಬಹಳ. ಹೀಗಾಗಿ ಜನರು ಒಂದೆರಡು ದಿವಸ ಜಾಸ್ತಿ ಉಳಿದು ನಗರ ಸಂದರ್ಶನ ಮಾಡುವುದು ಅನಿವಾರ್ಯವಾಗುತ್ತದೆ. ಆಗ ಜನರು ತಮ್ಮ ಜವಾಬ್ದಾರಿ ಮೇಲೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಗಾಂಧಿ ಭವನದ ಆವರಣದಲ್ಲಿ ಉಳಿಯಲು ಅನುಕೂಲವಿದೆ. ಆದರ ವಸತಿ ಶುಲ್ಕ ತಾವೇ ಕಟ್ಟಿಕೊಳ್ಳಬೇಕು. ನಗರ ಮಧ್ಯೆ ಇರುವುದರಿಂದ ಉಪಾಹಾರ ಗೃಹಗಳು ವಿಪುಲವಾಗಿವೆ.
2. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು.

ಅಕ್ಕಿ, ದವಸ -ಧಾನ್ಯ, ತರಕಾರಿ ಇತ್ಯಾದಿಗಳ ಬೆಲೆ ತೀರಾ ಏರಿರುವುದರಿಂದ ಸಾಮಗ್ರಿಗಳನ್ನು ಖರೀದಿಸುವುದು ಅತ್ಯಗತ್ಯವಾಗಿರುತ್ತದೆ ಮತ್ತು ವಸತಿ ವ್ಯವಸ್ಥೆಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಲಾಗಿದೆ.

3. ಸಮ್ಮೇಳನ ಸಮಿತಿಯು ಸಾಮೂಹಿಕವಾಗಿ ವಸತಿ ವ್ಯವಸ್ಥೆಯನ್ನು ಮಾಡುತದೆ. ಪ್ರತ್ಯೇಕವಾಗಿ ಲಾಡ್ಜಿಂಗ್‌ದಲ್ಲಿ ಇರಬಯಸುವವರು ಮೊದಲೇ ತಿಳಿಸಬೇಕು. ಸಮ್ಮೇಳನ ಸ್ಥಳಕ್ಕೆ ಸಮೀಪದಲ್ಲಿರುವ ಲಾಡ್ಜಿಂಗ್ ಹುಡುಕಲಾಗುವುದು. ಲಾಡ್ಜಿಂಗ್ ಕೋಣೆಯ ಬಾಡಿಗೆ ಜೊತೆಗೆ ಸರ್ವಿಸ್ ಛಾರ್ಜು ಸೇರಿಸಲಾಗುವುದು. ಮುಂದೆ ಹೊರಡಿಸುವ ಕರಪತ್ರದಲ್ಲಿ, ಕಲ್ಯಾಣ ಕಿರಣದಲ್ಲಿ ಲಾಡ್ಜಿಂಗ್ ಕೋಣೆಗಳ ಬಾಡಿಗೆಯ ವಿವರ ನೀಡಲಾಗುವುದು. ಹಣವನ್ನು ಮೊದಲೇ ಪಾವತಿ ಮಾಡಿದರೆ ಮಾತ್ರ ಕೋಣೆ ಕಾಯ್ದಿರಿಸಲಾಗುವುದು. ಏಕೆಂದರೆ ಖಾಸಗಿ ಅತಿಥಿ ಗೃಹಗಳವರು ಮುಂಗಡ ಹಣ ಕಟ್ಟದಿದ್ದರೆ ಕಾಯ್ದಿರಿಸುವುದಿಲ್ಲ ಮತ್ತೆ ಕೆಲವರು ಫೋನ್ ಮೂಲಕ ಹೇಳುತ್ತಾರೆ. ನಾವು ನಂಬಿ ಹಣವನ್ನು ಕಟ್ಟುತ್ತೇವೆ. ನಂತರ ಕಾರಣಾಂತರದಿಂದ ಬರಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆಗ ಯಾರೂ ಆ ಕೋಣೆಗೆ ಬರದಿದ್ದರೆ ನಮಗೆ ನಷ್ಟವಾಗುತ್ತದೆ. ಕಳೆದ ಎರಡು ಸಲದ ಅನುಭವದ ಮೇಲೆ ಈಗ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ.

4. ಸಮ್ಮೇಳನಗಳನ್ನು ನಾವು ಕಡಿಮೆ ಮಾಡಿದ್ದೇಕೆ ಎಂದರೆ ಅನೇಕರು ಪ್ರತಿನಿಧಿ ಶುಲ್ಕವನ್ನು ಕೊಡದಿರುವುದು. ಶರಣ ಮೇಳ, ಕಲ್ಯಾಣ ಪರ್ವಕ್ಕೆ ಧಾವಿಸಿದಂತೆ ಪರರಾಜ್ಯಗಳ ಸಮ್ಮೇಳನಕ್ಕೂ ಬಂದರೆ ನಾವು ಖರ್ಚುವೆಚ್ಚವನ್ನು ಹೇಗೆ ನಿಭಾಯಿಸಬೇಕು ? ಊರು ನೋಡಲು, ಸಾಮಾನು ಖರೀದಿಸಲು ಹಣ ಇರುತ್ತದೆ. ಪ್ರತಿನಿಧಿ ಶುಲ್ಕ ತುಂಬಲು ಇರದೆ ? ಧರ್ಮ ಸಂಸ್ಥೆಗೆ ಕೊಡಬೇಕಾದ ಶುಲ್ಕದ ಹಣದಲ್ಲಿ ಉಳಿಸಿಕೊಂಡು ವೈಯಕ್ತಿಕ ಸಾಮಾನು ಖರೀದಿಗೆ ಬಳಸಬೇಕೆಂಬ ಕ್ಷುಲ್ಲಕ ಮನೋಭಾವ ಕೆಲವರದು. ಈ ರೀತಿ ಮಾಡಬಾರದು. ಆದರಿಂದ ನಮಗೆ ಸಮ್ಮೇಳನ (ಶಿಬಿರ)ಗಳನ್ನು ನಡೆಸುವ ಉತ್ಸಾಹ ಕಡಿಮೆಯಾಗಿದೆ. ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮ ಗಿರಿಯ ಗಣ ಮೇಳಕ್ಕೆ ನಿರ್ಬಂಧ ವಿಧಿಸುವುದಿಲ್ಲ. ಆದರೆ ಪರವೂರಿನಲ್ಲಿ ಮಾಡುವಾಗ, ಎಲ್ಲ ಸಾಮಾನುಗಳು ತುಟ್ಟಿಯಾಗಿರುವ ಈ ಕಾಲದಲ್ಲಿ, ಸಮ್ಮೇಳನಗಳನ್ನು ಮಾಡುವುದು ಎಷ್ಟು ಶ್ರಮದ ಕೆಲಸ ಎಂಬುದನ್ನು ಶರಣ ಬಂಧುಗಳು ಮನಗಾಣಬೇಕು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

5. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ಸುತ್ತ ಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತ್ಸಾಹ ನಮ್ಮದಾಗಿರುತದೆ. ಆಗ ಇಲ್ಲಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು? ಕೇವಲ ಊರು ನೋಡಲು ಬರುವುದೇ ಆದರೆ ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

6. ಬೆಂಗಳೂರಿನಿಂದ ನೇರವಾಗಿ ಚೆನ್ನೈಗೆ ಹೋಗುವವವರಿಗೆ ರೈಲ್ವೆ ರಿಸರ್ವೇಷನ ನೆರವು ನೀಡಲಾಗುವುದು.

1. ಮಲಗಿ ಹೋಗಲು ರಾತ್ರಿ ಟ್ರೇನ್ - ಬೆಲೆ : ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 410-00

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 320-00 (ಗಂಡಸರಿಗೆ)

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 270-00 (ಮಹಿಳೆಯರಿಗೆ)

2. ಕುಳಿತು ಹೋಗುವ ಹಗಲಿನ ಟ್ರೇನ್ - ಬೆಲೆ : ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 240-00

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 200-00 (ಗಂಡಸರಿಗೆ)

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 150-00 (ಮಹಿಳೆಯರಿಗೆ)

(ಇವರು 60 ವರ್ಷ ಮೇಲಿನವರೆಂದು ಸಿದ್ಧಪಡಿಸಲು ಏನಾದರೂ ದಾಖಲೆ ತರಬೇಕು)

ಹೋಗುವಾಗ ಎಲ್ಲರೂ ಒಟ್ಟಿಗೆ ಹೋದರೂ ಬರುವಾಗ ಬೇರೆ ಬೇರೆ ಸಳಗಳಿಗೆ

ಹೋಗಿ ಬರುವುದರಿಂದ ವಾಪಸು ಬರುವ ದಿನವನ್ನು ತಿಳಿಸಬೇಕು. ತಡ ಮಾಡಿದರೆ ರಿಸರ್ವೇಷನ್ ಸಿಗುವುದು ಬಹಳ ಕಷ್ಟ. ಬೇಗನೆ ನಿರ್ಧಾರ ತೆಗೆದುಕೊಳ್ಳದೆ ಕೆಲವರು ಹಿಂದಿನ ದೆಹಲಿಯ ಸಮ್ಮೇಳನದ ಅವಕಾಶವನ್ನು ಕಳೆದುಕೊಂಡರು.

(ವಿ.ಸೂ: ದಕ್ಷಿಣ ಭಾರತವು ಬಹಳಷ್ಟು ಆಕರ್ಷಣೀಯ ಸ್ಥಳಗಳನ್ನು ಹೊಂದಿದ್ದು ಅನೇಕರು ಅವುಗಳನ್ನು ಸಂದರ್ಶಿಸುವ ಅಭಿಲಾಷೆ ಹೊಂದಿದ್ದಾರೆ. ಆ ಸ್ಥಳಗಳ ಮಾಹಿತಿ, ಪ್ರವಾಸದ ವೆಚ್ಚ ಮುಂತಾದ ವಿವರಗಳಿಗೆ ಇಂದುಶೇಖರ್ ಅವರನ್ನು ಸಂಪರ್ಕಿಸಿರಿ.)

ರೇಲ್ವೆ ರಿಸರ್ವೇಷನ್‌ಗೆ ಸಂಪರ್ಕಿಸಬೇಕಾದವರು : ಇಂದು ಶೇಖರ್ - 9945684230.

ವಿ.ಸೂ : ಮೇಲೆ ಕೊಟ್ಟಿರುವುದು ಕೇವಲ ರೇಲ್ವೆ ಛಾರ್ಜು. ಇದರಲ್ಲಿ ಪ್ರತಿನಿಧಿ ಶುಲ್ಕ ಸೇರಿಸಿಲ್ಲ. ಅದನ್ನು ಪ್ರತ್ಯೇಕವಾಗಿ ಕೊಡಬೇಕು.

ವಿಶೇಷ ಸೂಚನೆ : 1997ರ ಸಮ್ಮೇಳನದ ಸಮಯದಲ್ಲಿ ಕೆಲವರು ಪ್ರಮುಖರು ಸಂಗ್ರಹಿಸಿದ ಪ್ರತಿನಿಧಿ ಶುಲ್ಕವನ್ನು ಕೊಡದೆ ಆ ಹಣವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡರು. ಇದರಿಂದ ಸಮ್ಮೇಳನ ಸಮಿತಿಗೆ ತೊಂದರೆಯಾಯಿತಲ್ಲದೆ ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಲ್ಲಿ ಒಡಕು ಉಂಟಾಯಿತು. ಆದ್ದರಿಂದ ಈಗ ರಸೀತಿ ಪುಸ್ತಕಗಳನ್ನು ಕಳಿಸಲಾಗುವುದಿಲ್ಲ. ಕೇವಲ ಕರಪತ್ರಗಳನ್ನು ಮಾತ್ರ ಆಯ್ದ ನೇತಾರರಿಗೆ ಕಳಿಸಲಾಗುವುದು. ಕಲ್ಯಾಣ ಕಿರಣದ ಫೆಬ್ರವರಿ ಸಂಚಿಕೆಯಲ್ಲಿ ಅರ್ಜಿಯ ಮಾದರಿ ಇರುತ್ತದೆ. ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು.

10. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದೆರಡು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲವಾಗುತ್ತದೆ. ಒಂದೆರಡು ದಿವಸ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು. ಚೆನ್ನಾಯ್ ಬಹಳ ಉಷ್ಣಪ್ರದೇಶ. ಆದ್ದರಿಂದ ಪ್ರತಿನಿಧಿಗಳು ರಗ್ಗು ಮುಂತಾಗಿ ಹೆಚ್ಚಿಗೆ ಲಗೇಜು ತರುವ ಅಗತ್ಯವಿರುವುದಿಲ್ಲ. ಊಟದ ತಟ್ಟೆ, ಲೋಟ ಜೊತೆಗೆ ತಂದರೆ ಒಳ್ಳೆಯದು.

13. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನಗಳಲ್ಲಿ ಸ್ಕಾರ್ಫ್‌ಗಳು ಕಳೆದು ಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಧನ ಸಹಾಯಕ್ಕೆ ವಿನಂತಿ

ತಮಿಳುನಾಡಿನ ರಾಜಧಾನಿ ಚೆನ್ನಾಯಿಯಲ್ಲಿ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಮಹಾ ಪೋಷಕರು	: ರೂ 10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	: ರೂ 5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು	: ರೂ 3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	: ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	: ರೂ 800/-	(ಎಂಟು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	: ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು

ಮಾರ್ಗದರ್ಶನದಲ್ಲಿ ಒಂಬತ್ತನೆಯ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1.Basava Mahamane Charitable Trust, Payable at BANGALORE / CHENNAI

ವ್ಯವಹರಿಸುವ ವಿಳಾಸ :

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)
ಬಸವ ಮಂಟಪ, 2035, 20ನೇ ಮೇನ್,
2ನೇ ಬ್ಲಾಕು, ರಾಜಾಜಿ ನಗರ,
ಬೆಂಗಳೂರು -560010, ಕರ್ನಾಟಕ ರಾಜ್ಯ
ದೂರವಾಣಿ : 080-23325335/23131476

BASAVA MAHAMANE CHARITABLE TRUST (R)
BASAVA MANTAPA, 2035,
20th Main, Chord Road, 2nd Block
Rajajinagar, BANGALORE -10, Karnataka -St
Ph : 080-23325335, 23131476, 22923736

ಚೆನ್ನೈ ಕಾರ್ಯಾಲಯದ ವಿಳಾಸ :
BASAVA MAHAMANE CHARITABLE TRUST (R)
C/o.Basava Kirana, No.6, 2nd Floor,
"H "Block, Baid Mehatha Complex, 183,
Little Mount, (Mount Road)
Saidapet, Chennai -600015

ವಿಶೇಷ ವಿವರಗಳು

1. ಬಸವ ಜಯಂತಿಯ (ಏಪ್ರಿಲ್ 27) ನಿಮಿತ್ತ ಬಹಳ ಜನರು ಸಮ್ಮೇಳನ ದಿನಾಂಕ ಕುರಿತು ಆತಂಕ ವ್ಯಕ್ತಪಡಿಸಿದ ಕಾರಣ ಸಮ್ಮೇಳನ ದಿನಾಂಕಗಳನ್ನು 2009ರ ಮೇ 2, 3 ಮತ್ತು 4ಕ್ಕೆ ಬದಲಾಯಿಸಲಾಗಿದೆ.
2. ದಾಸೋಹಿಗಳು ಒಂದೊಂದು ಹೊತ್ತಿನ ಉಪಾಹಾರದ ಖರ್ಚು, ಮಧ್ಯಾಹ್ನ ಮತ್ತು ರಾತ್ರಿ ಊಟದ ಖರ್ಚು ವಹಿಸಿಕೊಳ್ಳಲು ಅವಕಾಶವಿದೆ.
3. ವಸತಿಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಲಾಗಿದೆ. ಟಿ. ನಗರದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಆವರಣಕ್ಕೆ ಬಂದ ಮೇಲೆ ವಸತಿ ವ್ಯವಸ್ಥೆಯ ವಿವರ ನೀಡಲಾಗುವುದು.
4. ಪ್ರತಿನಿಧಿ ಶುಲ್ಕ ಕಟ್ಟಿ ಅಲ್ಲೇ ಕಾರ್ಯಕರ್ತರಿಂದ ಬ್ಯಾಡ್ಜ್ ಪಡೆಯಬಹುದು. ಊಟದ ವ್ಯವಸ್ಥೆಯನ್ನು ಹಿಂದಿ ಪ್ರಚಾರ ಸಭಾದ ಆವರಣದಲ್ಲಿ ಮಾಡಲಾಗಿದೆ.

ದೂರವಾಣಿ ಸಂಖ್ಯೆಗಳು :

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ - 09791027029
ಪೂಜ್ಯ ಶ್ರೀ ಜ್ಞಾನೇಶ್ವರಿ ಮಾತಾಜಿ - 09791027031
ಶ್ರೀಕಂಠ ಕುಮಾರ್ - 09994327971
ಬಸವರಸ - 09791027030

- ಮಾತಾಜಿ

ತತ್ತ್ವ ನಿಷ್ಠೆ ಮತ್ತು ರಾಜಿ ಮನೋಭಾವ

ನಮ್ಮ 64ನೆಯ ವರ್ಧಂತಿ ಉತ್ಸವವನ್ನು ಬೆಂಗಳೂರು ರಾಷ್ಟ್ರೀಯ ಬಸವ ದಳ ಮತ್ತು ಗಣಾಚಾರ ದಳದವರು ಉತ್ಸುಕತೆಯಿಂದ ಏರ್ಪಡಿಸಿದ್ದರು. ಅಂದು ಅತಿಥಿಗಳಾಗಿ ಅನೇಕರು ಭಾಗವಹಿಸಿದ್ದರು. ಹೃದಯರೋಗ ತಜ್ಞರೂ, ಅತ್ಯುತ್ತಮ ಸಮಾಜ ಸೇವಾಕಾಂಕ್ಷೆಯುಳ್ಳವರು, ಉತ್ತಮ ವಾಗ್ಮಿಗಳು, ಒಳ್ಳೆಯ ಬರಹಗಾರರೂ ಆದ ಡಾ|| ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ಬಹಳ ಅಭಿಮಾನದಿಂದ ಮಾತನಾಡಿದರು. ಅವರು ಒಂದು ವಿಷಯ ಪ್ರಸ್ತಾಪಿಸಿದರು. "ನಿಮ್ಮಲ್ಲಿ ಎಂಥಾ ಅಗಾಧವಾದ ಪ್ರತಿಭೆ ಇದೆ, ವ್ಯಕ್ತಿತ್ವವಿದೆ. ಆದರೂ ನಿಮ್ಮನ್ನು ಏಕೆ ಎಲ್ಲರೂ (?) ಒಂಟಿಯಾಗಿ ಮಾಡಿದ್ದಾರೆ ನನಗೆ ಅರ್ಥವಾಗುತ್ತಿಲ್ಲ. ನೀವು ಕೆಲವು ವಿಷಯದಲ್ಲಿ ರಾಜಿ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಳ್ಳಬೇಕು." ಎಂದು ಹೇಳಿದರು. ನಾನು ಅವರೊಡನೆ ಚರ್ಚಿಸಲಿಲ್ಲ. ಏಕೆಂದರೆ ಯಾವ ವಿಷಯದಲ್ಲಿ ನಮಗೂ ಇತರರಿಗೂ ಭಿನ್ನಾಭಿಪ್ರಾಯವಿದೆ? ಏಕೆ ಇದೆ? ಎಂಬ ಬಗ್ಗೆ ತಾತ್ವಿಕವಾಗಿ ಡಾ|| ವಿಜಯಲಕ್ಷ್ಮಿ ಅವರಿಗೆ ಏನೂ ತಿಳಿದಿರಲಿಲ್ಲ. ಮತ್ತು ಅವರು ಅವಸರದಲ್ಲಿ ಹೊರಟು ನಿಂತಿದ್ದರು.

ಈ ಬಗ್ಗೆ ನಾನು ಸುದೀರ್ಘವಾಗಿ ಆಲೋಚಿಸಿದೆ. ನನ್ನಲ್ಲಿ ನಾನು ಪ್ರಶ್ನಿಸಿಕೊಂಡೆ. ಅವರು (ಅಂದರೆ ಕೆಲವು ಸಂಘ -ಸಂಸ್ಥೆಗಳವರು) ನಮ್ಮನ್ನು ದೂರವಿಟ್ಟು ಒಂಟಿಯಾಗಿ ಮಾಡಿದ್ದಾರೆಯೋ? ಅಥವಾ ನಾವೇ ಅವರುಗಳಿಂದ ದೂರವಿದ್ದೇವೆಯೊ? ನಮ್ಮ ಬದುಕಿನ ಸಿಂಹಾವಲೋಕನ ಮಾಡಿಕೊಂಡಾಗ ಎರಡನೆಯ ಪ್ರಶ್ನೆಯೇ ಸರಿಯಾದ ಉತ್ತರ ಎನಿಸಿತು. ನಾನು ಅಧ್ಯಾತ್ಮ ಜೀವನಕ್ಕೆ ಬಂದಾಗ ಲಿಂಗಾಯತ ಧರ್ಮದ ಸ್ವರೂಪವಾಗಲಿ, ಇತಿಹಾಸವಾಗಲಿ ತಿಳಿದಿರಲಿಲ್ಲ. ಮತ್ತು ನನಗೆ ಅದರಲ್ಲಿ ಆಸಕ್ತಿಯೂ ಇರಲಿಲ್ಲ. ಅಕ್ಕಮಹಾದೇವಿಯ ದಾರ್ಶನಿಕ ವ್ಯಕ್ತಿತ್ವ ಮತ್ತು ವೈರಾಗ್ಯ ನನ್ನನ್ನು ಆಕರ್ಷಿಸಿದ್ದವು. ಎಂ.ಎ ಆದ ಮೇಲೆ ಪಿಎಚ್.ಡಿ ಮಾಡಬೇಕೆಂದು ಲಿಂಗಾಯತ ಮತ್ತು ಕ್ರೈಸ್ತ ಧರ್ಮದ ತುಲನಾತ್ಮಕ ಅಧ್ಯಯನ ಆರಂಭಿಸಿದಾಗ ನನ್ನ ಚಿಂತನೆ ಸಾಮಾಜಿಕ ಮುಖದಲ್ಲಿ ಹರಿಯತೊಡಗಿತು. ನಾನು ಸಂಶೋಧನೆಗಾಗಿ ಅಧ್ಯಯನ ಮಾಡಿದ್ದು ಆರೆಂಟು ತಿಂಗಳು ಮಾತ್ರ. ನಂತರ ಪ್ರವಚನಗಳು ಬಿಡುವಿಲ್ಲದೆ ನಡೆಯತೊಡಗಿದವು; ಸಂಶೋಧನೆ ನಿಂತು ಹೋಯಿತು.

ಒಂದು ಧರ್ಮ ಉಗಮಗೊಳ್ಳುವ ರೀತಿ, ಸೈದ್ಧಾಂತಿಕ ಅಂಶಗಳು ಮನವರಿಕೆಯಾಗತೊಡಗಿದಾಗ ಲಿಂಗಾಯತವು ಒಂದು ಜಾತಿಯಲ್ಲ ಧರ್ಮ; ಗುರು ಬಸವಣ್ಣನವರೇ ಇದರ ಸ್ಥಾಪಕರು ಎಂಬುದು ಸ್ಪಷ್ಟವಾಗತೊಡಗಿತು. ಅಷ್ಟರಲ್ಲಿ ಪಾಂಡಿಚೆರಿ, ಚಿದಂಬರಮ್, ಮೈಲಾಮ್ ಮುಂತಾದ ತಮಿಳುನಾಡಿನ ಸ್ಥಳಗಳನ್ನು ನೋಡಹೋದಾಗ ವೀರಶೈವ ಮಠಗಳು ಕಾಣಬಂದವು. ಅವುಗಳ ಸಂದರ್ಶನ ಮತ್ತಷ್ಟು ಸತ್ಯವನ್ನು ಹೊರಗೆಡವಿತಲ್ಲದೆ ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ ಎಂಬ ಬಗ್ಗೆ ದೃಢಪಡಿಸಿತು. ಈ ಎಲ್ಲ ವಿಷಯಗಳನ್ನು ಪ್ರತಿಪಾದಿಸತೊಡಗಿದಾಗ ಕೆಲವರಿಗೆ ಕಹಿ ಎನ್ನಿಸತೊಡಗಿತು. ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಶಿವಯೋಗ ಮಂದಿರ ಮುಚ್ಚಿಟ್ಟ ಸತ್ಯ ಹೊರಗೆ ಬರತೊಡಗಿದಾಗ ಬಹಳ ಜನಕ್ಕೆ ಗಾಬರಿ. ನಾನು ಲಿಂಗಾಯತ ಧರ್ಮ ಕೈಪಿಡಿ ಎಂಬ ಪುಸ್ತಕ ಬರೆದೆ. ಲಿಂ|| ಶರಣ. ಆರ್.ಎಂ.ಬಿ.ಆರಾಧ್ಯರು ಪೂರ್ಣ ವೆಚ್ಚ ಕೊಟ್ಟು ಅದು ಪ್ರಕಟಗೊಳ್ಳಲು ನೆರವಾದರು. ಸಂತೋಷದಿಂದ ಅದನ್ನು ವೀರಶೈವ ಮಹಾಸಭಾದ ಆಗಿನ ಅಧ್ಯಕ್ಷರಾಗಿದ್ದ ಶ್ರೀ.ಜೆ.ಬಿ. ಮಲ್ಲಾರಾಧ್ಯರಿಗೆ ಕೊಟ್ಟಾಗ ಅವರು ನೋಡಿ ಗಾಬರಿಗೊಂಡು, "ಎಂಥಾ ಕೆಲಸ ಮಾಡಿದೆ! ನಮ್ಮ ಬುಡದ ಮೂಲಕ್ಕೆ ಇದು ಕೊಡಲಿ ಪೆಟ್ಟು" ಎಂದರಂತೆ!

ಪೂಜ್ಯರಾದ ಅಪ್ಪಾಜಿ ಮೊದಲು ಬರೆದ ಪುಸ್ತಕಗಳಲ್ಲಿ ವೀರಶೈವದ ಬಳಕೆ ಮಾಡುತ್ತಿದ್ದರು. ವೀರಶೈವನಾರು ಎಂಬ ಪಟವನ್ನೇ ಮುದ್ರಿಸಿದ್ದರು."ಇಷ್ಟಲಿಂಗಗಳು ಹರಪ್ಪಾ-ಮೊಹಂಜೋದಾರೋ -ದಲ್ಲೇ ಇದ್ದವು. ಬಸವಣ್ಣನವರು ಹಳೆಯ ಮನೆಯನ್ನೇ ರಿಪೇರಿ ಮಾಡಿದರು."ಎಂದೆಲ್ಲ ಹೇಳುತ್ತಿದ್ದರು. ನಾನು ಅಧ್ಯಯನ ಮಾಡಿ ಒಂದೊಂದೇ ವಿಷಯ ಹೇಳುತ್ತಾ ಹೋದಂತೆ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡು , ತಮ್ಮ ಪ್ರವಚನ - ಬರವಣಿಗೆಯಲ್ಲಿ ಬದಲಾವಣೆ ಮಾಡಿಕೊಂಡರು. ಲಿಂಗಾಯತ ಧರ್ಮ ಕೈಪಿಡಿ, ಸ್ವಯಂಕೃತ ಬಸವಣ್ಣ, ಇಷ್ಟಲಿಂಗ ಜನಕ ಬಸವಣ್ಣ ಮುಂತಾದ ಕೃತಿಗಳು ಮಹತ್ವಪೂರ್ಣವಾದ ಸತ್ಯವನ್ನು ಸಾರಿದವು.

ಶ್ರೀ.ಜೆ.ಬಿ. ಮಲ್ಲಾರಾಧ್ಯರ ನಂತರ ಶ್ರೀ ಐ.ಎಂ.ಮಗದುಮ್ ಮಹಾಸಭಾ ಅಧ್ಯಕ್ಷರಾದರು. ಪೂಜ್ಯ ಅಪ್ಪಾಜಿ ಮತ್ತು ನಾವು ಸತ್ಯ ಸಂಗತಿಯನ್ನು ಮನವರಿಕೆ ಮಾಡಲು ಯತ್ನಿಸಿದೆವು.

ಅವರು ಒಪ್ಪಿಕೊಂಡರು. ಮುಂದೆ ಒಮ್ಮೆ ಜನರಲ್ ಬಾಡಿ ಕರೆದು ಈ ವಿಷಯ ಚರ್ಚೆಗೆ ಇಡೋಣ ಎಂದು ಒಪ್ಪಿದರು. ನಮ್ಮನ್ನು ಆಜೀವ ಸದಸ್ಯರನ್ನಾಗಿ ಮಾಡಿದರು. ಅಷ್ಟರಲ್ಲಿ ಅವರು ಪಾರ್ಶ್ವವಾಯು ಪೀಡಿತರಾದರು. ಮಹಾಸಭಾ "ಇದ್ದಂಗಿರೋ ಸಿದ್ದಪ್ಪ" ಆಯಿತು. ಧರ್ಮಪಿತ ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪದ ವೀರಶೈವ ಮಹಾಸಭಾಕ್ಕೆ ರಾಜೀನಾಮೆ ನೀಡಿದೆವು. ಕೆಲವು ಹೋಟೆಲ್ ಮುಂದೆ Veg / Non-Veg ಎಂದು ಹಾಕಿರುವಂತೆ ಲಿಂಗಾಯತ / ವೀರಶೈವ ಎಂದು ಕಲಬೆರಕೆ ಮಾಡುವ, ಗುರು ಬಸವಣ್ಣನವರನ್ನು ಲಿಂಗಾಯತ ಧರ್ಮ ಸಂಸ್ಥಾಪಕರು ಎಂದು ಒಪ್ಪದ ಸಂಸ್ಥೆಯೊಡನೆ ಒಡನಾಟವೂ ಬೇಡ, ಗುದ್ದಾಟವೂ ಬೇಡ ಎಂದು ಅದರಿಂದ ದೂರ ಉಳಿಯಲು ನಿರ್ಧರಿಸಿದೆವು. ಯಾರನ್ನೋ ಸಮಾಧಾನಿಸಲು ಸಂಪ್ರದಾಯ (ಪಂಚಾಚಾರ್ಯ)ವಾದಿಗಳನ್ನು ಸಂತೈಸಲು ಸತ್ಯವನ್ನು ಮುಚ್ಚಿಟ್ಟು ಸುಳ್ಳು ಹೇಳುವುದು ಬೇಡ. ಇದು ಆತ್ಮವಂಚನೆ. ಏಕೆಂದರೆ ಲಿಂಗಾಯತ ಮತ್ತು ವೀರಶೈವ ಸ್ಪಷ್ಟವಾಗಿ ಬೇರೆ ಬೇರೆ. ಲಿಂಗಾಯತವು ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ. ಇಷ್ಟಲಿಂಗವನ್ನೇ ಗಣ ಲಾಂಛನವಾಗಿ ಹೊಂದಿದ ಇದರ ಸಂಸ್ಥಾಪಕರು 12ನೆಯ ಶತಮಾನದ ಬಸವಣ್ಣನವರು. ವೀರಶೈವವು ಬಸವ ಪೂರ್ವದ ಒಂದು ಶೈವ ಪಂಥ ಆದ್ದರಿಂದ ಲಿಂಗಾಯತ ಮತ್ತು ವೀರಶೈವ ಒಂದೇ ಎನ್ನುವುದು ತಪ್ಪು. ಇನ್ನು ವೀರಶೈವ - ಲಿಂಗಾಯತ ಎಂದಾಗ ಅದು ಲಿಂಗಾಯತದೊಳಗಣ ಒಂದು ಉಪಪಂಗಡ ಎಂಬುದು ಸ್ಪಷ್ಟವಾಗುವುದು. ಮಡಿವಾಳ ಲಿಂಗಾಯತರು, ಪಂಚಮಸಾಲಿ ಲಿಂಗಾಯತರು, ಬಣಜಿಗ ಲಿಂಗಾಯತರು ಎಂದಂತೆ ವೀರಶೈವ ಲಿಂಗಾಯತರು ಎಂಬುದು ಒಂದು ಪಂಗಡ. ಇವರು ತಮಿಳುನಾಡು ಮತ್ತು ಆಂಧ್ರ ಮೂಲದಿಂದ ಬಸವ ಸಂಸ್ಥಾಪಿತ ಲಿಂಗಾಯತ ಧರ್ಮಕ್ಕೆ ಬಂದವರು. ಹೀಗಾಗಿ ಕರ್ನಾಟಕದಲ್ಲಿ ಉದಿಸಿದ ಲಿಂಗಾಯತ ಧರ್ಮಕ್ಕೆ ವೀರಶೈವ - ಲಿಂಗಾಯತ ಎಂದು ಕರೆಯುವುದು ತಪ್ಪು. ಈ ಪ್ರಯೋಗದಿಂದಾಗಿ ಯಾವುದೇ ದಿಕ್ಕಿನಿಂದ ವಿಮರ್ಶಿಸಿದರೂ ವೀರಶೈವ ಮಹಾಸಭೆ ತನ್ನ ವಿಚಾರ ಧಾರೆಯನ್ನು ಸಮರ್ಥಿಸಿ ಕೊಳ್ಳಲಾರದು.

ಲಿಂಗಾಯತ ಸಮಾಜವನ್ನು ಅಧ್ಯಯನ ಮಾಡಿದರೆ ಮಹಾರಾಷ್ಟ್ರ, ತಮಿಳುನಾಡು ಮುಂತಾದೆಡೆಯಲ್ಲಿ ಈ ಧರ್ಮದ ಸಾರ ತಿಳಿದಿಲ್ಲ, ಎಲ್ಲರೂ ವೈದಿಕಾಚರಣೆಯಲ್ಲೇ ತಲ್ಲೀನರಾಗಿದ್ದಾರೆ. ಆದರೆ ಗುರು ಬಸವಣ್ಣನವರು ತಮ್ಮ ಗುರುವೆಂದು ತಿಳಿದು ಎಲ್ಲರೂ ಬಸವ ಜಯಂತಿ ಆಚರಿಸುತ್ತಾರೆ. ಶರೀರದಲ್ಲಿ ವಂಶವಾಹಿನಿ ಕಣಗಳು ತಲೆ ಮಾರುಗಳಲ್ಲಿ ಹರಿದು ಬರುವಂತೆ ಬಸವ ಭಕ್ತಿ ಹರಿದುಬಂದಿದೆ. ಒಂದು ವೇಳೆ (ಕಾಲ್ಪನಿಕ) ರೇಣುಕಾಚಾರ್ಯರು ಸ್ಥಾಪಕರಾಗಿದ್ದರೆ ಅಲ್ಲೆಲ್ಲ ಏಕೆ ಪ್ರಚಾರದಲ್ಲಿ ಇರುತ್ತಿರಲಿಲ್ಲ? ರೇಣುಕಾಚಾರ್ಯರು ಸ್ಥಾಪಕರು ಎಂಬ ಸುಳ್ಳನ್ನು ನಾವು ಒಪ್ಪಿಕೊಳ್ಳ ಬೇಕೆಂದು ಲಿಂಗಾಯತ ಪ್ರಮುಖ ಸಂಸ್ಥೆಗಳ ಆಗ್ರಹ. ಬಸವ ಪಥಿಕರಾದ ನಾವು ಎಂದೂ ಸುಳ್ಳನ್ನು ಯಾರ ಮುಲಾಜಿಗಾಗಿಯೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಅಖಿಲ ಭಾರತ ವೀರಶೈವ ಮಹಾಸಭಾದ ನಂತರ ಮುಂಚೂಣಿಯಲ್ಲಿರುವ ಮತ್ತೊಂದು ಸಂಸ್ಥೆ ಲಿಂ॥ಶರಣ.ಬಿ.ಡಿ.ಜತ್ತಿಯವರು ಕಟ್ಟಿದ ಬಸವ ಸಮಿತಿ. ವೀರಶೈವ ಮಹಾಸಭಾದಂತೆ ಇದು ಪಂಚಾಚಾರ್ಯ/ ವೀರಶೈವವಾದಿಯಲ್ಲದಿದ್ದರೂ ಬಸವಾಭಿಮಾನಿಗಳ ಮುಖವಾಡ ಹಾಕಿದ ಪ್ರಚ್ಛನ್ನ ಪಂಚಾಚಾರ್ಯವಾದಿಗಳಿಂದ ಕೂಡಿದ ಸಂಸ್ಥೆ. ಅವರಿಗೆ ಅಂಜಿ ಎಂದೂ ಧರ್ಮ ಸ್ಥಾಪಕರು ಬಸವಣ್ಣನವರು ಎಂಬ ದೃಢ ಹೇಳಿಕೆ ನೀಡದ ಪುಕ್ಕಲುತನ ಬಸವ ಸಮಿತಿಯದು, ಅತ್ತೆಗೆ ಅಂಜಿ ನಡೆಯುವ ಸೊಸೆ ಅಸ್ವತಂತ್ರಳಿದ್ದಂತೆ. ಇನ್ನು ಶರಣ ಸಾಹಿತ್ಯ ಪರಿಷತ್ತು, ಗುರು ಬಸವಣ್ಣನವರು ಧರ್ಮಗುರು ಎಂದೊಪ್ಪದ, ವೇದಿಕೆ ಮೇಲೆ ಬಸವ ಭಾವಚಿತ್ರವನ್ನಿಡಲು ವಿರೋಧಿಸುವ ಶರಣಾಭಿಮಾನಿ(?) ಸಂಸ್ಥೆ. ಲಿಂಗಾಯತ ಸಮಾಜದ ಗಣ್ಯರೆಂದು ಬೀಗುವ ಇವರೆಲ್ಲರೊಡನೆ ಹೊಂದಿಕೊಂಡು ಸಾಗಬೇಕಾದರೆ ಡಾ॥ ವಿಜಯಲಕ್ಷ್ಮಿಯವರು ಹೇಳುವಂತೆ ನಾವು ಸ್ವಲ್ಪ ರಾಜಿ ಮಾಡಿಕೊಳ್ಳಬೇಕು. ಅವರಿಗೆ ಯಾವ ವಿಷಯ ಎಂಬ ಬಗ್ಗೆ ಅರಿವಿಲ್ಲ. ನಾನೇ ಹೇಳುತ್ತೇನೆ.

1. ಗುರು ಬಸವಣ್ಣನವರು ಧರ್ಮಗುರು ಎಂದು ಹೇಳಬಾರದು.
2. ಲಿಂಗಾಯತ ಧರ್ಮ ಸಂಸ್ಥಾಪಕರು ಬಸವಣ್ಣನವರು ಎನ್ನಬಾರದು.
3. ಲಿಂಗಾಯತವು ಸ್ವತಂತ್ರ ಧರ್ಮ ಎನ್ನದೆ, ಹಿಂದು ಧರ್ಮದೊಳಗಣ ಒಂದು ಜಾತಿ ಎನ್ನಬೇಕು.
4. ಲಿಂಗಾಯತ ಮತ್ತು ವೀರಶೈವ ಒಂದೇ ಎನ್ನಬೇಕು.
5. ಲಿಂಗದೇವ ಎಂಬ ವಚನಾಂಕಿತವನ್ನು ರದ್ದು ಮಾಡಬೇಕು.

ಇಷ್ಟು ವಿಷಯಗಳಲ್ಲಿ ರಾಜಿ ಮಾಡಿಕೊಂಡರೆ ಮುಂದಿನ ಅವರ ನಿರೀಕ್ಷೆ ಏನಿರಬಹುದು. ಜಂಗಮ ಒಂದು ಜಾತಿ ಎಂದು, ಜಂಗಮ ಜಾತಿಯವರಷ್ಟೆ ಮಠಪೀಠ ಪೌರೋಹಿತ್ಯಗಳಿಗೆ ಅರ್ಹರೆಂದು ಒಪ್ಪಬೇಕು. ಮಹಿಳೆಯರು ಗುರು ಜಗದ್ಗುರುವಾಗ ಬಲ್ಲರು ಎಂಬುದನ್ನು ಒಪ್ಪಬಾರದು. ಹೀಗೆ ನಿರೀಕ್ಷೆ ಮುಂದುವರಿಯುತ್ತದೆ. ಒಟ್ಟಾರೆ ಬಸವಣ್ಣನವರ ಕ್ರಾಂತಿಕಾರಿ ವಿಚಾರಗಳನ್ನೆಲ್ಲ ಬಲಿಗೊಟ್ಟು ವೀರಶೈವ ಗಣ್ಯರ ಪ್ರೀತಿಯನ್ನು ಗಳಿಸಬೇಕು.

ಗುರು ಬಸವಣ್ಣನವರ ತತ್ವಗಳನ್ನು ಬರೀ ಜನಪ್ರಿಯ ಭಾಷಣಗಳನ್ನು ಮಾಡಲಷ್ಟೆ ಬಳಸದೆ ಅನುಸರಣೆ ಮಾಡಬೇಕೆಂಬ ಮನಸ್ಸುಗಳಿಗೆ ಅಂಥ ರಾಜಿ ಸಮ್ಮತವಾದೀತೆ?

ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ?
ಸುಂಡಿಲು ಮುರಿದಡೆ ಗಜವೇನು ಬಾತೆ?
ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ?
ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ, ಲಿಂಗದೇವಾ?

ಎನ್ನುತ್ತದೆ ಧರ್ಮಪಿತರ ವಾಣಿ.

ಬಸವ ಪಥವು (ಬಸವ ಸಮಿತಿಯ ಪತ್ರಿಕೆಯಲ್ಲ)- ಅರ್ಥಾತ್ ಗುರು ಬಸವಣ್ಣನವರು ತೋರಿದ ಮಾರ್ಗವು ಕಲಿಸುವ ನಿಷ್ಠೆ ಹೇಗಿರುವುದೆಂದರೆ,

ಕಾಯದ ಕಳವಳಕ್ಕಂಜಿ, 'ಕಾಯಯ್ಯ' ಎನ್ನೆನು;
ಜೀವನೋಪಾಯಕ್ಕಂಜಿ 'ಈಯಯ್ಯ' ಎನ್ನೆನು;
'ಯದ್‌ಭಾವಂ ತದ್ ಭವತಿ'
ಉರಿ ಬರಲಿ ಸಿರಿ ಬರಲಿ, 'ಬೇಕು. ಬೇಡ' ಎನ್ನೆನಯ್ಯಾ
ಆ ನಿಮ್ಮ ಹಾರೆನು, ಮಾನವರ ಬೇಡೆನು.
ಆಣೆ, ನಿಮ್ಮಾಣೆ, ಲಿಂಗದೇವಾ. - ಬ.ವ.ದೀ.693

ಯುಗದ ಉತ್ಸಾಹದ ನೋಡಿರೆ

ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು ಹರ್ಷದಿಂದ ಉಬ್ಬಿ ಕೊಬ್ಬಿ ಹೇಳುತ್ತಾರೆ, ಗುರು ಬಸವಣ್ಣನವರ ಅವತಾರದಿಂದ ಇಡೀ ಕಲಿಯುಗದಲ್ಲೇ ಅಪೂರ್ವವಾದ ಉತ್ಸವ ಜರುಗುತ್ತಿದೆ. ಇಲ್ಲಿ ಉತ್ಸಾಹ ಎಂಬ ಪದವನ್ನೂ ಇಡಬಹುದು. ಮಳೆ ಬಂದಾಗ ಬರಡಾದ ಭೂಮಿ, ಗಿಡಮರಗಳು ಎಲ್ಲವೂ ಹಸಿರಾಗಿ ನಗುವಂತೆ ಗುರು ಬಸವಣ್ಣನವರ ಬರುವಿಕೆ ಮತ್ತು ಇರುವಿಕೆಯಿಂದ ಒಂದು ಬಗೆಯ ಜೀವನೋತ್ಸಾಹ ಎಲ್ಲರಲ್ಲಿಯೂ ಮೂಡಿತು. ನೊಂದವರು, ಶೋಷಿತರು, ದಲಿತರು, ದಮನಿತರು ಎಲ್ಲರಲ್ಲೂ ಆಶಾ ಕಿರಣಗಳು ಉದಿಸಿದವು. ಹೀಗಾಗಿ ಕ್ರಾಂತಿ ಪುರುಷ ಬಸವಣ್ಣನವರ ಅವತಾರ ಯುಗದ ಉತ್ಸಾಹಕ್ಕೆ ಮಾತ್ರವಲ್ಲ ಯುಗದ ಉತ್ಸವಕ್ಕೇ ಕಾರಣವಾಯಿತು. ಏಕೆಂದರೆ ಮತ್ತು ಹೇಗೆಂದರೆ ಎಂಬ ಪ್ರಶ್ನೆಗೆ ಪ್ರಭುದೇವರು ವಿವರಿಸುತ್ತಾರೆ.

ಸೃಷ್ಟಿಕರ್ತ ಲಿಂಗದೇವನಿಗೆ 5 ಮುಖಗಳು. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ. ದೇವನು 5 ಕರ್ತವ್ಯಗಳನ್ನು ನಿರ್ವಹಿಸುವನು. ಅವೆಂದರೆ ಸೃಷ್ಟಿ, ಸ್ಥಿತಿ, ಲಯ, ತಿರೋದಾನ, ಅನುಗ್ರಹ. ಇವನ್ನು ನಿರ್ವಹಿಸುವ ದೇವನಲ್ಲಿ ಅಂತರ್ಗತವಾದ 5 ಶಕ್ತಿಗಳೆಂದರೆ ಪರಾ, ಆದಿ, ಇಚ್ಛಾ, ಜ್ಞಾನ, ಕ್ರಿಯಾ. ಪುರಾಣಗಳು ಹೇಳುವುದನ್ನು ನಂಬಿ ಲೋಕದ ಅಜ್ಞ ಜನರು ಚತುರ್ಮುಖ ಬ್ರಹ್ಮನು ಸೃಷ್ಟಿಸುತ್ತಾನೆ. ವಿಷ್ಣುವು ಪಾಲಿಸುತ್ತಾನೆ, ರುದ್ರ, (ಶಿವ)ನು ಲಯ ಮಾಡುತ್ತಾನೆ ಎಂದು ನಂಬಿದ್ದಾರೆ. ಇದನ್ನು ನಿರಾಕರಿಸಿದ ಬಸವಣ್ಣನವರು ಸೃಷ್ಟಿಯ ನಿರ್ಮಾಣ, ಸೃಷ್ಟಿಕರ್ತನ ಮಹಿಮೆ ಆಗು ಹೋಗನ್ನು ತಿಳಿದರು.

ಆ ಶರಣ ಬಸವಣ್ಣನವರು ಯಾರಿಗೂ ಹೋಲಿಸಲಾರದ, ತಾನೇ ತಾನಾದ ವ್ಯಕ್ತಿತ್ವ ಉಳ್ಳವರು. ಹಿಂದಿನವರ ಯಾವ ಮಾರ್ಗವೂ ಅವರಿಗೆ ಸಮ್ಮತವಾಗಲಿಲ್ಲ. ಹೀಗಾಗಿ ಸಾಂಖ್ಯ -ಯೋಗ, ನ್ಯಾಯ-ವೈಶೇಷಕ, ಪೂರ್ವ ಮೀಮಾಂಸ -ಉತ್ತರ ಮೀಮಾಂಸ (ವೇದಾಂತ) ಇವುಗಳಿಗೆ ಕೈಚಾಚಿ ಬೇಡಲಿಲ್ಲ. ಇವು ಆಸ್ತಿಕ (Theistic) ದರ್ಶನಗಳಾದರೆ ಜೈನ, ಬೌದ್ಧ ಮತ್ತು ಚಾರ್ವಾಕ ನಿರೀಶ್ವರವಾದಿ (Atheistic) ದರ್ಶನಗಳು. ಇವನ್ನೂ ಬಸವಣ್ಣನವರು ಪ್ರೀತಿಸಲಿಲ್ಲ. ವೇದ, ಶಾಸ್ತ್ರ

ಆಗಮ, ಪುರಾಣ, ಛಂದಸ್ಸು, ನಿಘಂಟು -ಮುಂತಾದುವುಗಳ ಬೆನ್ನು ಹತ್ತಲಿಲ್ಲ. ಏಕೆಂದರೆ ಅವುಗಳನ್ನು ಅನುಸರಿಸುವವರ ಅಂಗದ ಮೇಲೆ ಗುರು (ಕರುಣೆ)ಇಲ್ಲ, ಲಿಂಗ (ಧಾರಣೆ)ಇಲ್ಲ, ಜಂಗಮ (ಮಾರ್ಗದರ್ಶನ, ಶರಣರ ಸಂಗ) ಇಲ್ಲ, ಗುರು-ಜಂಗಮ ಇಲ್ಲದ ಕಾರಣ ಕರುಣ-ಪ್ರಸಾದವೇ ಇಲ್ಲ. ಹೀಗಾಗಿ ಅವರಸು ಭವಿಭಾಷೆ. ಗುರು ಬಸವಣ್ಣನವರು ನವಪಥವನ್ನು ಕೊಟ್ಟರು. ಈ ಪಂಚಪಥ (Five Lane Track) ಹೆದ್ದಾರಿಯ ಮುಖ್ಯ ತತ್ತ್ವಗಳು ಗುರು,ಲಿಂಗ, ಜಂಗಮ, ಪಾದೋದಕ, ಪ್ರಸಾದ.

ಗುರು ಬಸವಣ್ಣವರಿಗೆ ಮೊದಲು ಗುರು ಎಂಬ ಪರಿಕಲ್ಪನೆ ಇರಬಹುದು. ಆದರೆ ಅದು ಐಚ್ಛಿಕ(Optional) ಆಗಿತ್ತು. ಎಲ್ಲರಿಗೂ ಗುರು ಕಾರುಣ್ಯ, ದೀಕ್ಷೆ ಪ್ರಾಪ್ತವಾಗುತ್ತಿರಲಿಲ್ಲ. ಗುರುವನ್ನು ಹುಡುಕಿ ಕೊಂಡು ಶಿಷ್ಯನು ಅಲೆಯಬೇಕಿತ್ತು. ಗುರು ಬಸವಣ್ಣನವರು ದೀಕ್ಷೆಯನ್ನು ಸಾರ್ವತ್ರಿಕಗೊಳಿಸಿದರು. ಹುಟ್ಟಿದ ಮಗು ಹೆಣ್ಣಿರಲಿ ಗಂಡಿರಲಿ ಅದಕ್ಕೆ ಇಷ್ಟಲಿಂಗಧಾರಣೆ ಲಭ್ಯವಾಯಿತು. ಎಲ್ಲರಿಗೂ ಜಾತಿ, ವರ್ಣ, ವರ್ಗ ಭೇದವಿಲ್ಲದೆ ಜಂಗಮನ ಮಾರ್ಗದರ್ಶನ, ಸಾಂಗತ್ಯ ಲಭ್ಯವಾದವು. ಕರುಣೋದಕ ಕರುಣ ಪ್ರಸಾದ ಲಭ್ಯವಾದವು. ಇಂಥ ಅಪೂರ್ವ ಸಾಧನೆಯಿಂದಾಗಿ ಗುರು ಬಸವಣ್ಣನವರನ್ನು ಎಲ್ಲರೂ ಕೊಂಡಾಡುವವರೇ ಆದರು.

ಮೂಕ ಪ್ರಾಣಿಗಳು ಸಹ ಗುರು ಬಸವಣ್ಣನವರಿಗೆ ಪ್ರಣಾಮ ಮಾಡತೊಡಗಿದವು. ಏಕೆಂದರೆ ಅವರು ಅಹಿಂಸಾ ತತ್ವ ಬೋಧನೆಯಿಂದ ಅಸಂಖ್ಯಾತ ಜನ ಮಾಂಸಾಹಾರಿಗಳನ್ನು ಸಸ್ಯಾಹಾರಿ-ಗಳನ್ನಾಗಿ ಮಾಡಿದರು. ಯಜ್ಞಯಾಗಾದಿಗಳಲ್ಲಿ ಪ್ರಾಣಿ ಬಲಿ ಕೊಡುವುದನ್ನು ವಿರೋಧಿಸಿ, ತಪ್ಪಿಸಿದರು. ಕ್ಷುದ್ರ ದೇವತೆಗಳಿಗೆ ಪ್ರಾಣಿಬಲಿ ಕೊಡುವುದನ್ನು ತಪ್ಪಿಸಿದರು. ಕಡಿಯಲು ಕೊಂಡೊಯ್ಯುತ್ತಿದ್ದ ಕುರಿಯನ್ನು ಹಣ ಕೊಟ್ಟು ಕೊಂಡು ಕಿನ್ನರಿ ಬ್ರಹ್ಮಣ್ಣ ಅದಕ್ಕೆ ಜೀವದಾನ ಮಾಡಿದ ಕಥೆ ಬರುತ್ತದೆ. ಹೀಗಾಗಿ ಪ್ರಾಣಿಗಳೆಲ್ಲವೂ "ಅಪ್ಪಾ, ಪ್ರಾಣಿ ಬಲಿ ತಪ್ಪಿಸಿದ್ದರಿಂದ ನಮ್ಮ ಮತ್ತು ನಮ್ಮ ಸಂಗಡಿಗರ ಪ್ರಾಣ ಉಳಿದವು" ಎಂದು ಕೊಂಡಾಡುವಂತಾಯಿತು. ಸಸ್ಯಗಳಿಗೂ ಜೀವವುಂಟು. ದೇವರಿಗೆ ಆಡಂಬರದ ಕೋಟಿ ಬಿಲ್ವಾರ್ಚನೆ, ಸಹಸ್ರ ಪುಷ್ಪಾರ್ಚನೆ ಮಾಡಿ ಗಿಡಮರಗಳನ್ನು ತರಿಯುತ್ತಿದ್ದುದನ್ನು ತಪ್ಪಿಸಿ ಸರಳ ಪೂಜೆ ಕಲಿಸಿದ್ದರಿಂದ ಎಲ್ಲ ಜೀವಿಗಳು ಜಯಾ, ಒಡೆಯ ಎನ್ನತೊಡಗಿದವು. ಎಲ್ಲ ಆತ್ಮಗಳು ಜಾತಿ ವರ್ಣ ವರ್ಗ ಭೇದವಿಲ್ಲದೆ ಗುರು ಬಸವಣ್ಣನವರಲ್ಲಿ ಆಶ್ರಯ ಬೇಡತೊಡಗಿದವು. ಹೀಗಾಗಿ ಗುರು ಬಸವಣ್ಣನವರ ಪಾದಕ್ಕೆ ಹದಿನಾಲ್ಕು ಲೋಕದ ಜನರೆಲ್ಲರೂ ಜಯವಾಗಲಿ, ನಮ್ಮ ಒಡೆಯ(ಜಿಯ) ನೀನು ಎಂದು ಕೊಂಡಾಡುವಂತಾಗಿದೆ.

★★★

ಪ್ರವಚನ ಕೇಳಬೇಕು

ಲಿಂಗದೇವ ನಿಲುಕನೆಂದು ಮರುಗಬೇಡಿರಿ
ಶರಣರೊಚನವನೊಮ್ಮೆ ಓದಿರಿ
ವಚನ ಪಚನವಾಗದೆಂದು ಮರುಗಬೇಡಿರಿ
ಪೂಜ್ಯ ಮಾತಾಜಿಯ ಪ್ರವಚನವನ್ನೊಮ್ಮೆ ಕೇಳಿರಿ
ಅಲ್ಲಿ ಲಿಂಗದೇವನುಂಟು ಶರಣರುಂಟು ನೋಡಾ
ಗುರು ಬಸವಲಿಂಗಾ ॥

ಷಟ್ ಸಂಜ್ಞೆ ತೋರಿದ ಗುರು ಮಾತೆಗೆ

8 – ನಿರಾವರಣನಂತಿದ್ದ ನನಗೆ ಅಷ್ಟಾವರಣದ ಹೊದಿಕೆ ಹೊದಿಸಿದ ಗುರು ಮಾತೆಗೆ ಶರಣು।
6 – ಕಂಡ ಕಂಡ ಆಚರಣೆ ಆಚರಿಸುತ್ತಿದ್ದ ನನಗೆ ಷಡಾಚಾರದಲ್ಲಿ ತೊಡಗಿಸಿದ ಗುರು ಮಾತೆಗೆ ಶರಣು।
6 – ಸ್ಥಲದ ಮರ್ಮ ತಿಳಿಯದ ನನಗೆ ಆರೂಸ್ಥಲದ ಮರ್ಮ ತಿಳಿಸಿದ ಗುರು ಮಾತೆಗೆ ಶರಣು।
6 – ಸೂತ್ರ ತಪ್ಪಿ ಅಲೆಯುತ್ತಿದ್ದ ನನಗೆ ಷಟ್‌ಸೂತ್ರ ಕೊಟ್ಟ ಗುರು ಮಾತೆಗೆ ಶರಣು।
6 – ನಿಷ್ಠೆ ಬಿಟ್ಟು ಭಕ್ತಿಗೆಟ್ಟ ನನಗೆ ಷಟ್‌ಶೀಲ ತೋರಿದ ಗುರು ಮಾತೆಗೆ ಶರಣು।
6 – ಅನ್ಯ ಕ್ರಿಯೆಯಲ್ಲಿದ್ದ ನನಗೆ ಷಟ್‌ಕ್ರಿಯೆಗೆ ಹಚ್ಚಿದ ಗುರು ಮಾತೆಗೆ ಶರಣು ಶರಣಾರ್ಥಿ।

– ಮಂಜುನಾಥ ಜಿ.ಅಂಗಡಿ, ಧಾರವಾಡ

ಬಸವ ವಚನಾಮೃತ

147.ಯಾಂತ್ರಿಕ ಶ್ರವಣ - ಪಠಣ ನಿಷ್ಪ್ರಯೋಜಕ

ಓದಿದಡೇನು, ಕೇಳಿದಡೇನು ಶಿವಪಥವನರಿಯದನ್ನಕ್ಕ?
ಓದಿತ್ತು ಕಾಣಿರೋ ಶುಕನು ಶಿವಜ್ಞಾನವನರಿಯದೆ;
ಓದಿದ ಫಲವು ಮಾದಾರ ಚನ್ನಯ್ಯಂಗಾಯಿತ್ತು
ಲಿಂಗದೇವಾ. – ಬ.ವ.ದೀ.145

ಕೆಲವರು ಧರ್ಮಶಾಸ್ತ್ರಗಳನ್ನು ನಿತ್ಯವೂ ಪಠಣ ಮಾಡುವ ನೇಮವನ್ನು ಹಾಕಿಕೊಳ್ಳುತ್ತಾರೆ. ಕೆಲವು ಮಾಸಗಳನ್ನು ಪವಿತ್ರ ಮಾಸಗಳೆಂದು ಗುರುತಿಸಿಕೊಂಡು ಆಗ ಗುಡಿ - ಗುಂಡಾರಗಳಲ್ಲಿ, ಊರುಗಳಲ್ಲಿ ಪ್ರವಚನ, ಕೀರ್ತನೆ, ಪುರಾಣ ವಾಚನವನ್ನು ಏರ್ಪಡಿಸುತ್ತಾರೆ. ಪ್ರವಚನ - ಪುರಾಣ ಶ್ರವಣದಿಂದ ಪುಣ್ಯಾರ್ಜನೆಯಾಗುತ್ತದೆ ಎಂದು ಭಾವಿಸುತ್ತಾರೆ. ಆದರೆ ಆ ಶಾಸ್ತ್ರವಾಕ್ಯಗಳು ಹೇಳುವ ದಾರಿಯನ್ನು ಮಾತ್ರ ಅನುಸರಿಸುವುದಿಲ್ಲ. ಪರಧನ, ಪರಸ್ತ್ರೀಯನ್ನು ಲಪಟಾಯಿಸಬಾರದೆಂದು ಎಲ್ಲಾ ಶಾಸ್ತ್ರಗಳೂ ಹೇಳುತ್ತವೆ. ಶಾಸ್ತ್ರಗಳನ್ನು ಓದುತ್ತ, ಕೇಳುತ್ತ ಸ್ವಾರ್ಥಿಗಳಾಗಿ, ಲೋಭಿಗಳಾಗಿ, ಕಾಮುಕರಾಗಿ ವರ್ತಿಸುತ್ತಾರೆ. ಈ ಓದುವಿಕೆ ಹೇಗೆ ಎಂದರೆ ಶುಕ ಅಂದರೆ ಗಿಳಿಯು ಓದಿದಂತೆ. ಅದು ಶಬ್ದದ ಅರ್ಥವನ್ನು ತಿಳಿಯದೆ ಯಾಂತ್ರಿಕವಾಗಿ ಪಠಿಸುತ್ತದೆ. ಮಾದಾರ ಚನ್ನಯ್ಯ ನಿಜ ಅನುಭಾವಿ. ಅಂತಃಕರಣ ಪೂರ್ವಕವಾಗಿ ಭಕ್ತಿಯನ್ನು ಮಾಡಿದವನು. ಆದ್ದರಿಂದ ಗಿಳಿಯಂತೆ ಶಾಸ್ತ್ರ ಪಠಣ ಮಾಡಿ, ನಿಜ ಜ್ಞಾನವನ್ನು ಸಂಪಾದಿಸಿಕೊಳ್ಳದಿದ್ದರೆ ಇವರ ಓದಿನ ಪುಣ್ಯವೆಲ್ಲವೂ ಮಾದಾರ ಚನ್ನಯ್ಯನ ಪಾಲಿಗೆ ಸಲ್ಲುತ್ತದೆ.

148. ಶರಣರ ಡೊಂಕು ಲಿಂಗದೇವನಿಗೆ ಪ್ರಿಯ

ಹಾವಿನ ಡೊಂಕು ಹುತ್ತಕ್ಕೆ ಸಸಿನ;
ನದಿಯ ಡೊಂಕು ಸಮುದ್ರಕ್ಕೆ ಸಸಿನ
ಲಿಂಗದೇವನ ಶರಣರ ಡೊಂಕು ಲಿಂಗಕ್ಕೆ ಸಸಿನ – ಬ.ವ.ದೀ.146

ಡೊಂಕು ಅಂದರೆ ಲೋಪ-ದೋಷ ಎಂದು ಈ ವಚನದ ಕಡೆಯ ವಾಕ್ಯದ ನೆರವಿನಿಂದ ಅರ್ಥ ಮಾಡಬಹುದು. ಡೊಂಕು ಎಂಬುದರ ವಾಚ್ಯಾರ್ಥ ಸೊಟ್ಟಾಬಟ್ಟ (Zig-Zag) ಎಂದು. ಇದು ಭೌತಿಕವಾದುದು. ಹಾವಿನ ನಡಿಗೆ ಸೊಟ್ಟಾಬಟ್ಟಾ ಇರುವುದು. ಇದಕ್ಕೆ ತಕ್ಕಂತೆ ಹುತ್ತದ ರಚನೆ ಇರುವುದು. ಹಾವು ನೇರವಾಗಿ ಕೋಲಿನಂತೆ ನುಗ್ಗಿದರೆ ಹುತ್ತದೊಳಕ್ಕೆ ಹೋಗಲು ಸಾಧ್ಯವಿಲ್ಲ. ಹಾವಿನ ಡೊಂಕು ನಡಿಗೆಗೆ ಹುತ್ತದ ಒಳರಚನೆಗೆ ಬಲು ಹೊಂದಾಣಿಕೆ.

ನದಿಯದು ಡೊಂಕು ನಡಿಗೆ. ಅದು ಹಾಗೆ ಡೊಂಕು ಡೊಂಕಾಗಿ ಹಳ್ಳಕೊಳ್ಳಗಳಲ್ಲಿ ಸಾಗುವುದು ಎಂದೇ ಸಮುದ್ರವನ್ನು ಸೇರುತ್ತದೆ. ಅದೇ ರೀತಿ ಲಿಂಗದೇವರಿಗೆ ಪ್ರೀತಿಪಾತ್ರರಾದ ಶರಣರ ಕೆಲವು ಡೊಂಕುಗಳು ಪರಮಾತ್ಮನಿಗೆ ಕೋಪವನ್ನು ತರಿಸದೆ ಪ್ರೀತಿಯನ್ನು ಉಕ್ಕಿಸುತ್ತದೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಸೌಂದರ್ಯ ನಂಬಿ ಓರ್ವ ಹುಡುಗಿಯನ್ನು ಬಯಸಿ, ಅವಳನ್ನು ಹೊಂದಬೇಕೆಂದು, ತನ್ನ ಬಯಕೆಯನ್ನು ಕೈಗೂಡಿಸಿಕೊಡಬೇಕೆಂದು ಶಿವನೊಡನೆ ಹಟ ಮಾಡುತ್ತಾನೆ, ಮುನಿಸಿಕೊಳ್ಳುತ್ತಾನೆ. ದೇವನಲ್ಲಿ ಇಂಥಾ ಕ್ಷುಲ್ಲಕ ಆಸೆ ತೋರ್ಪಡಿಸುವುದೆ? ಕಡೆಗೆ ಶಿವ ಕುಂಟಿಣಿಯಾಗಿ, ವೇಷಧಾರಿಯಾಗಿ ಹೋಗಿ ಆಕೆಯ ಮನ ಒಲಿಸುತ್ತಾನೆ. ನಂಬಿಯ ಭಕ್ತಿ ಅವನ ಜಾರತನವನ್ನು ದೇವರು ಪ್ರೀತಿಸುವಂತೆ ಮಾಡಿತು. ಉಳ್ಳಾಗಡ್ಡೆ ಪ್ರಸಂಗದಲ್ಲಿ ಕಿನ್ನರಿ ಬೊಮ್ಮಣ್ಣ ಮುನಿಸಿಕೊಂಡು ಹೋಗೇಬಿಟ್ಟ. ಆತನ ಮುನಿಸಿನ ಡೊಂಕು - ಗುರು ಬಸವಣ್ಣನವರು ಆತ್ಮಾವಲೋಕನ ಮಾಡಿಕೊಂಡು ಮಹಾಮನೆಯ ದಾಸೋಹ ನಿಲಯಕ್ಕೆ ಉಳ್ಳಾಗಡ್ಡೆಗೆ ಪ್ರವೇಶ ದೊರಕಿಸಿತು ಪ್ರಭುದೇವರು ಪ್ರದರ್ಶಿಸಿದ (ತೋರಿಕೆಯ)ಶೀಘ್ರ ಕೋಪದ ಆಟಾಟೋಪದ ಡೊಂಕನ್ನು ಗುರು ಬಸವಣ್ಣ ಸಹಿಸಿಕೊಂಡರೆಂದೇ ಅವರು ಶೂನ್ಯಪೀಠಾಧೀಶರಾದುದು. ಈ ಡೊಂಕುಗಳು ಆಂತರಿಕ ದೌರ್ಬಲ್ಯಗಳಲ್ಲ, ಹೊರಗಿನಿಂದ ಬಂದು ಕುಳಿತ ಕಸ ಕಡ್ಡಿಗಳಂತೆ; ದೇವನ ಕೃಪೆಗೆ ಅಡ್ಡಿಯಾಗವು.

149. ಭಕ್ತನ ವಾಣಿ ಲಿಂಗದ ನುಡಿ

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು.
ಭಕ್ತದೇಹಿಕ ದೇವ ಅನಿಮಿಷನಾಗಿ!
ಲಿಂಗದೇವ, ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು - ಬ.ವ.ದೀ.147

ಶರಣರ ಮುಖ ದರ್ಪಣವಿದ್ದಂತೆ; ಅಲ್ಲಿ ದಿವ್ಯ ಜ್ಞಾನದ ಬೆಳಕು ಪ್ರತಿಫಲಿಸುವುದು. ಏಕೆಂದರೆ ಲಿಂಗದೇವನು ನಿರಾಕಾರನು, ಅವನಿಗೆ ಮಾತನಾಡಲು ಬಾಯಿಯಿಲ್ಲ, ಅವನು ಖಂಡಿತನಲ್ಲ. ಆದರೆ ಚೈತನ್ಯ ಸ್ವರೂಪನಾದ ದೇವನು ಭಕ್ತದೇಹಿಕನು. ಶರಣರ ಹೃದಯದಲ್ಲಿ ನಿಮಿಷವೂ ಎಡಬಿಡದೆ ಕುಳಿತು ಭಕ್ತನ ಮೂಲಕ ಮಾತನಾಡುವನು. ಅಂತರಂಗ ಶುದ್ಧವಾಗಿ, ಲಿಂಗದೇವನಿಗೆ ಶರಣಾಗತನಾದ ಭಕ್ತನು ಮಾತನಾಡುತ್ತಿದ್ದರೆ ಆ ಮಾತುಗಳು ಮುತ್ತುಗಳಂತೆ ಉದುರುತ್ತಿರುತ್ತವೆ. ಆ ಮಾತಿನ ರಾಶಿಯ ನಡುವೆ ಲಿಂಗದೇವನು ಅರ್ಥಾತ್ ದೈವೀಜ್ಞಾನ ನೆಲೆಸಿರುವುದು.

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು ಮಾತನಾಡಿದರೆ ಅಲ್ಲಿ ತತ್ವಚಿಂತನೆ ಕಾಣಬರುತ್ತಿತ್ತು. ಕುಳಿತಲ್ಲಿ, ನಿಂತಲ್ಲಿ ತಾತ್ವಿಕ ವಿಷಯಗಳನ್ನು ಪ್ರತಿಪಾದಿಸುತ್ತಿದ್ದರು. ಪ್ರಸಾದ (ಊಟ) ಮಾಡುವಾಗಲೂ ಚಿಂತನೆಯೆ. ವಾಕ್ ಹೋದರೆ, ಹೋಗಿ ಬರುತಲೇ ಬೆತ್ತವನ್ನು ಒಂದೆಡೆ ಇಟ್ಟು, 'ಮಾತಾಜಿ, ಇಂದು ಕೆಲವು ಸ್ಫುರಣಗಳು ಹೊಳೆದವು. ಇಲ್ಲಿ ಕೇಳ್ರಿ.' ಎನ್ನುತ್ತಿದ್ದರು. ಯಾರಿಗೂ ಬೇರೆ ವಿಷಯ ಮಾತನಾಡಲು, ಹರಟೆ ಹೊಡೆಯಲು ಅವಕಾಶ ಕೊಡುತ್ತಿರಲಿಲ್ಲ. ಪೂಜ್ಯ ಅಪ್ಪಾಜಿಯವರ ಬಾಯಿಂದ ಯಾವ ತಾತ್ವಿಕ ಚಿಂತನೆ ಅಭಿವ್ಯಕ್ತವಾಗುವುದೋ ಎಂದು ನಾವುಗಳು ಕಾಯುತ್ತಿದ್ದೆವು. ಭಕ್ತರು ಬಂದಾಗಲೂ ಅಷ್ಟೇ. ಅವರಿಗೆ ಪ್ರಶ್ನೆ ಕೇಳಿ, ಮಾತಿಗೆಳೆದು ತತ್ವವನ್ನು ತಿಳಿಸಿ, ಅವರ ಹೃದಯದಲ್ಲಿ ಚಿಂತನೆಯ ಕಿಡಿ ಹಚ್ಚಿ ಕಳಿಸುತ್ತಿದ್ದರು. 'ಭಕ್ತನ ನುಡಿಯ ನಡುವೆ ಲಿಂಗದೇವ ರಾಶಿಯಾಗಿಪ್ಪನು.' ಎಂಬುದಕ್ಕೆ ಪೂಜ್ಯ ಅಪ್ಪಾಜಿಯವರ ಮಾತು ಜೀವಂತ ಉದಾಹರಣೆಯಾಗಿತ್ತು.

150. ಅತಿರೇಕದ ಭಕ್ತಿ

ಭಕ್ತಿ ಎಂತಹುದಯ್ಯಾ?
ದಾಸಯ್ಯ ಮಾಡಿದಂತಹದಯ್ಯಾ.
ಭಕ್ತಿ ಎಂತಹುದಯ್ಯಾ?
ಸಿರಿಯಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹುದಯ್ಯಾ?
ಸಿಂಧು ಬಲ್ಲಾಳ ಮಾಡಿದಂತಹದಯ್ಯಾ.
ಭಕ್ತಿ ಎಂತಹದಯ್ಯಾ? ಕೂಡಲ ಸಂಗಮದೇವಾ
ನೀ ಬಾಣನ ಬಾಗಿಲ ಕಾಯ್ದಂತಹದಯ್ಯಾ. - ಬ.ವ.ದೀ.148

151. ಆವೇಶದ ಅವ್ಯೆಚಾರಿಕ ಭಕ್ತಿ

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ!
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ
ಭಯ ಕಾಣಿರಣ್ಣಾ!
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ!
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ!
ಅಘಟಿತಘಟಿತರು ವಿಪರೀತ ಚರಿತರು
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ! ಬ.ವ.ದೀ.149

ಈ ಎರಡೂ ವಚನಗಳನ್ನು ಸೇರಿಸಿ ವ್ಯಾಖ್ಯಾನ ಬರೆಯಲು ಬಯಸಿದ್ದೇನೆ. ಇವೆರಡೂ ವಚನಗಳು ಪರಸ್ಪರ ವಿರುದ್ಧಾರ್ಥದಿಂದ ಕೂಡಿವೆ. ಮೊದಲ ವಚನದಲ್ಲಿ ದಾಸಯ್ಯ, ಸಿರಿಯಾಳ, ಸಿಂಧು ಬಲ್ಲಾಳ ಮಾಡಿದ ಭಕ್ತಿಯ ಬಗ್ಗೆ ಮೆಚ್ಚುಗೆ ಇದ್ದರೆ ಎರಡನೆಯದರಲ್ಲಿ ಟೀಕೆ ಇದೆ. ಆದ್ದರಿಂದ ಮೊದಲ ವಚನ ಬಾಲ್ಯದಲ್ಲಿ ಬರೆದುದು ಎರಡನೆಯ ವಚನ ಪ್ರೌಢಾವಸ್ಥೆಯಲ್ಲಿ ಬರೆದುದು ಎಂದು ಸ್ಪಷ್ಟವಾಗಿ ಊಹಿಸಬಹುದು.

ಅಬ್ಬಾ ಭಕ್ತಿ ಎಷ್ಟು ಕಷ್ಟಕರವಾದುದು. ಅತ್ಯಂತ ಬೆಲೆಬಾಳುವ ರೇಷ್ಮೆ ಪೀತಾಂಬರವೊಂದನ್ನು

ನೇಯ್ದು, ದೇವರ ದಾಸಿಮಯ್ಯ ಅದನ್ನು ಮಾರಿ, ಮನೆಗೆ ಪಡಿಪದಾರ್ಥಗಳನ್ನು ತರಲು ಹೊರಟಿದ್ದ ದಾರಿಯಲ್ಲಿ ಓರ್ವ ಭಕ್ತನು ಚಳಿಯಲ್ಲಿ ಗಡಗಡ ನಡುಗುವುದು ನೋಡಿ ಆ ಬೆಲೆ ಬಾಳುವ ಪೀತಾಂಬರವನ್ನೇ ಕೊಟ್ಟುಬಿಟ್ಟ. ಆ ಮುದುಕನೋ ಅದನ್ನು ತುಂಡು ಮಾಡಿ ಸುತ್ತಿಕೊಂಡ. ದೇವರ ದಾಸಿಮಯ್ಯ ಸ್ವಲ್ಪವೂ ನೊಂದುಕೊಳ್ಳಲಿಲ್ಲ. ಬರಿಗೈಯಿಂದ ಮನೆಗೆ ನಡೆದ. ಆದರೆ ಮನೆಯು ಸಂಪತ್ತು, ದವಸ - ಧಾನ್ಯಗಳಿಂದ ತುಂಬಿ ತುಳುಕುತ್ತಿತ್ತು. ಹೀಗೆ ದೇವಾಂಗ ಕುಲತಿಲಕ ದಾಸಿಮಯ್ಯ ವಸ್ತ್ರವನಿತ್ತು ತವನಿಧಿಯ ಪಡೆದ. ಅಬ್ಬಾ! ಎಂತಹ ನಿಸ್ವಾರ್ಥ ಕೊಡುಗೆ ಎಂದು ಬಾಲಕ ಬಸವರಸರು ಉದ್ಗಾರ ತೆಗೆಯುತ್ತಾರೆ.

ಇನ್ನು ಸಿರಿಯಾಳ ಸೆಟ್ಟಿ! ಅಂಥ ಭಕ್ತಿಯನ್ನು ಮಾಡಲು ನನಗಾಗಲಿ, ಯಾರಿಗೇ ಆಗಲಿ ಸಾಧ್ಯವೆ? ಓರ್ವ ಜೋಗಿ ಬಂದು ನರ ಮಾಂಸ ಬೇಡಿದೆ. ಸ್ವಂತ ಮಗನನ್ನೇ ಕೊಂದು ಅಡಿಗೆ ಮಾಡಿಸಿಟ್ಟ. ಕೊಲ್ಲುವಾಗ ಸಿರಿಯಾಳನಾಗಲೀ ಅವನ ಪತ್ನಿ ಚೆಂಗಳೆಯಾಗಲಿ ಸ್ವಲ್ಪವೂ ನೊಂದುಕೊಳ್ಳಲಿಲ್ಲ. ಎಂತಹ ಅಪೂರ್ವ ಭಕ್ತಿ!

ಇನ್ನು ಸಿಂಧು ಬಲ್ಲಾಳನದು ಇನ್ನೂ ಅಪೂರ್ವ ಭಕ್ತಿ. ಶಿವನು ಮಾರುವೇಷದಲ್ಲಿ ಬಂದು ರಾಜನ ಪತ್ನಿಯನ್ನೇ ಬೇಡಿದ. ಸ್ವಲ್ಪವೂ ಹಿಂಜರಿಯದೆ ಸಿಂಧುಬಲ್ಲಾಳ ಪತ್ನಿಯನ್ನೇ ಅರ್ಪಿಸಿದ.

ಬಾಣಾಸುರ ಮಹಾಶಿವಭಕ್ತ. ಶಿವನು ಪ್ರತ್ಯಕ್ಷನಾಗಿ ನಿನಗೇನು ವರ ಬೇಕು ಎಂದಾಗ, ಏನೂ ಬೇಡ. ನೀನು ಸದಾ ನನ್ನ ಬಳಿ ಇರಬೇಕು ಎಂದು ಕೇಳಿದಕ್ಕೆ ಶಿವನು ಬಾಣಾಸುರನ ಮನೆಯ ಬಾಗಿಲನ್ನೇ ಕಾಯ್ದನು. ಇವರೆಲ್ಲ ಅಸಾಮಾನ್ಯ ಭಕ್ತಿಯನ್ನು ಮಾಡಿ ಶಿವನನ್ನು ಒಲಿಸಿಕೊಂಡರು. ನನಗೆ ಇಂಥದೆಲ್ಲ ಸಾಧ್ಯವಿಲ್ಲದ ದುರ್ಭಾಗ್ಯ ಎಂದು ಬಾಲಕ ಬಸವರಸರು ದುಃಖ ಪಡುತ್ತಾರೆ.

ಬುದ್ಧಿ ಪ್ರೌಢವಾದಂತೆ ಈ ಮುನ್ನಿನ ಪುರಾತನರು ಮಾಡಿದ್ದು ಅವ್ಯೆಚಾರಿಕ ಆವೇಶದ ಭಕ್ತಿ ಎನಿಸುತ್ತದೆ. ಅದು ಖಂಡಿತಾ ಅನುಕರಣೀಯ ಭಕ್ತಿಯಲ್ಲ ಎಂಬ ಭಾವ ಮೂಡುತ್ತದೆ. ಆಗ ಉದ್ಗರಿಸುತ್ತಾರೆ, ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ! ಎಂದು. ನಿಜ ಯೋಗಿಯಾದವನು ಪರಸ್ತ್ರೀಯನ್ನು ಬಯಸುವನೆ? ಅವನು ಕೇಳಿದ ಎಂದು ಸಿಂಧು ಬಲ್ಲಾಳ, ಆ ವೇಷಧಾರಿಯನ್ನು ಖಂಡಿಸದೆ ಪತ್ನಿಯನ್ನು ಕೊಟ್ಟುದು ಅತಿರೇಕದ ಅವಿವೇಕದ ಭಕ್ತಿಯಲ್ಲವೆ? ಇಂಥ ಭಕ್ತಿ ಪಥವು ಭಯವನ್ನೇ ಹುಟ್ಟಿಸುವುದು. ಶಿವನ ವೇಷಧಾರಿಯೊಬ್ಬ ಬಂದು ನರಮಾಂಸವನ್ನು ಕೇಳಿದರೆ ಭಾವಾವೇಶದಿಂದ ಮಗನನ್ನೇ ಕಡಿದು ಬೇಯಿಸುವುದೆ? ಹಾಗೆ ಕೇಳುವವನು ಎಂಥಾ ಯೋಗಿ ಎಂಬ ತಿಳುವಳಿಕೆ ಸಿರಿಯಾಳನಿಗೆ ಬೇಡವೆ? ಬೆಲೆ ಬಾಳುವ ರೇಷ್ಮೆ ವಸ್ತ್ರವನ್ನು ಒಬ್ಬಾತ ಸೀಳಿ, ಉಟ್ಟ. ಇದರಿಂದ ಯೋಗಿ, ಜೋಗಿಗಳು ಏನು ಕೇಳಿ ಬಿಡುವರೋ ಅವರನ್ನು ನಂಬುವುದೇ ಬೇಡ ಎನ್ನಿಸುವುದಿಲ್ಲವೆ? ಕೆಲವು ಶಿವಭಕ್ತರ ನಡೆ ಬಲು ವಿಚಿತ್ರ ಹಾಗೂ ವಿಲಕ್ಷಣ. ಅವರು ವಿಪರೀತ ಚರಿತರು. ಇನ್ನಾರಿಗೂ ಸಾಧ್ಯವಾಗದುದನ್ನು ಆವೇಶದಲ್ಲಿ ಮಾಡಿಬಿಡುವರು. ಅವರು ನಡೆದ ದಾರಿ ಅನುಕರಣೀಯ ಎನಿಸದೆ ಭಯಾನಕ ಎನ್ನಿಸುವುದು. ಹೀಗೆ ಈ ಎರಡು ವಚನಗಳು ವಿಭಿನ್ನ ಮಾನಸಿಕ ಸ್ಥಿತಿಯಲ್ಲಿ ಬಸವಣ್ಣನವರು ಬರೆದಂತಹವು.

152. ತನ್ನನೀವ ಲಿಂಗದೇವ

ದೇವನೊಳ್ಳಿದನೆಂದು ಮುಯ್ಯಾನಲು ಬೇಡ;
ಕರಕಟ ಕಾಡಿದನೊಳ್ಳಿದನೆ?
ಅಳಿಸುವ ನಗಿಸುವನೊಳ್ಳಿದನೆ?
ಬೆಚ್ಚದೆ ಬೆದರದೆ ತೊತ್ತುತನವ ಮಾಡಲು,
ತನ್ನನೀವನು ಲಿಂಗದೇವ - ಬ.ವ.ದೀ.150

ಪರಮಾತ್ಮನು ಒಳ್ಳೆಯವನು, ಸದುಹೃದಯಿ ಎಂದು ಪ್ರೀತಿ ಮಾಡಲು ಹೋಗಬೇಡ - ಎಲೆ ಮನವೆ! ಅವನು ಎಂಥಾ ಒಳ್ಳೆಯವನು ಭಕ್ತರನ್ನು ಕರಕರ ಕಾಡುವವನು ಒಳ್ಳೆಯವನೆ? ಒಮ್ಮೆ ಕಷ್ಟಗಳನ್ನು ಕೊಟ್ಟು ಅಳಿಸುತ್ತಾನೆ. ಮತ್ತೊಮ್ಮೆ ಅನುಗ್ರಹದ ಹನಿಗಳನ್ನು ಉದುರಿಸಿ ನಗಿಸುತ್ತಾನೆ? ಎಂಥಾ ದೇವನು! ಎಲೆ ಮನವೆ, ಹೀಗೆ ನಾನು ಅನ್ನಬಾರದಿತ್ತು, ತಪ್ಪಾಯ್ತು. ಏಕೆ ಗೊತ್ತೆ? ಲಿಂಗದೇವನು ಭಕ್ತನ ದೃಢತೆಯನ್ನು, ನಿಷ್ಠೆಯನ್ನು ಪರೀಕ್ಷಿಸಲು ಕಷ್ಟಗಳನ್ನು ಕೊಟ್ಟಾಗ ಸ್ವಲ್ಪವೂ ಬೆಚ್ಚದೆ, ಬೆದರದೆ ಅವನ ಸೇವೆಯನ್ನು ಮಾಡಿದರೆ ಕಡೆಗೆ ತನ್ನನ್ನೇ ಕೊಟ್ಟುಕೊಳ್ಳುವ ಕರುಣಾಮಯಿ ಅವನು. ಸಾಧಕಾವಸ್ಥೆಯಲ್ಲಿ ಈ ರೀತಿಯ ಮನೋಭಾವನೆಗಳು ಅಂತರಂಗದಲ್ಲಿ ಹಾಯುತ್ತಿರುತ್ತವೆ.

153.ನಂಬಿದರೆ ದೇವ ತನ್ನನೀವ

ನೆರೆ ನಂಬೋ ನೆರೆ ನಂಬೋ ಧರದುರವಿಲ್ಲದೆ ಸಾಮವೇದಿಗಳಂತೆ;
ನೆರೆ ನಂಬೋ ನೆರೆ ನಂಬೋ ದಾಸ-ದುಗ್ಗಳೆಯಂತೆ
ನೆರೆ ನಂಬೋ ನೆರೆ ನಂಬೋ ಸಿರಿಯಾಳ ಚಂಗಳೆಯಂತೆ
ನೆರೆ ನಂಬೋ ನೆರೆ ನಂಬೋ ಸಿಂಧು ಬಲ್ಲಾಳನಂತೆ.
ನಂಬಿದೆಯಾದಡೆ ತನ್ನನೀವ ಕೂಡಲ ಸಂಗಮದೇವ -ಬ.ವ.ದೀ.151

ಇದು ಸಹಿತ ಬಾಲ್ಯಾವಸ್ಥೆಯಲ್ಲಿ ಬರೆದ ವಚನ. ತನ್ನ ಮನಸ್ಸಿಗೇ ಬಸವರಸರು ಹೇಳಿಕೊಳ್ಳುತ್ತಾರೆ, ಚೆನ್ನಾಗಿ ನಂಬು, ದೃಢವಾಗಿ ನಂಬು ಎಲೆ ಮನಸ್ಸೇ! ಯಾರಂತೆ?

ಸಾಮವೇದಿಗಳಂತೆ : ಸಾಮವೇದಿಗಳು ಬ್ರಾಹ್ಮಣರು. ಆದರೆ ಅವರಿಗೆ ಶಿವದೀಕ್ಷೆ ಇರಲಿಲ್ಲ. ಶ್ವಪಚಯ್ಯ ಚಾಂಡಾಲ ಅವನಿಗೆ ಶಿವದೀಕ್ಷೆಯಾಗಿತ್ತು ಆದ್ದರಿಂದ ಶ್ವಪಚಯ್ಯ ಸಾಮವೇದಿಯನ್ನು ಭವಿ ಎಂದುದಲ್ಲದೆ ಆತನ ದೃಷ್ಟಿ ಪ್ರಸಾದದ ಮೇಲೆ ಬೀಳಬಾರದೆಂದು ಮುಚ್ಚಿದ. ಇದರಿಂದ ಅವಮಾನಿತನಾದ ಸಾಮವೇದಿ ತಾನೂ ದೀಕ್ಷೆಯನ್ನು ಪಡೆದುಕೊಂಡು ಶಿವನನ್ನು ಸಾಕ್ಷಾತ್ಕರಿಸಿಕೊಂಡ.

ದಾಸ -ದುಗ್ಗಳೆ, ಸಿರಿಯಾಳ, ಸಿಂಧು ಬಲ್ಲಾಳರ ಕಥೆ ತಿಳಿದಾಗಿದೆ. ಇವರೆಲ್ಲ ದೃಢವಾಗಿ ನಂಬಿದರೆಂದೇ ಶಿವ(ಕೂಡಲ ಸಂಗಮದೇವನು)ನು ಒಲಿದನು; ತನ್ನನ್ನೇ ಇವರಿಗೆ ಕೊಟ್ಟುಕೊಂಡನು. ಏನು ಮಾಡಲಿ, ನನ್ನಲ್ಲಿ ಆ ತರಹದ ದೃಢತ್ವ ಬರುತ್ತಿಲ್ಲವಲ್ಲ ಎಂಬ ಪರಿತಾಪವೂ ಇದರಲ್ಲಿ ವ್ಯಕ್ತವಾಗಿದೆ.

154. ಶರಣರೊಡನೆ ಸೋಲುವಿಕೆಯೂ ಚಂದ

ಬಲ್ಲಿದರೊಡನೆ ಬವರವಾದೊಡೆ ಗೆಲಲುಂಟು, ಸೋಲಲುಂಟು;
ಕಳ್ಳನೊಡನೆ ಭಾಷೆ ಪೂರಾಯವೆ ಅಯ್ಯಾ?
ನಮ್ಮ ಲಿಂಗದೇವನ ಶರಣರಿಗೆ ಮಾಡಿ ಮಾಡಿ
ತನು ಸವೆದು ಬಡವಾದಡೆ
ಧನ ಸವೆದು ಬಡವನಾದಡೆ
ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು - ಬ.ವ.ದೀ.152

ಜ್ಞಾನಿಗಳ ಜೊತೆಗೆ ಯುದ್ಧ ಮಾಡುವುದು ಬಲು ಸೊಗಸು. ಯುದ್ಧವೆಂದರೆ ಹಿಂಸಾತ್ಮಕ ಶಾರೀರಿಕ ಯುದ್ಧವಲ್ಲ ಬೌದ್ಧಿಕ ವಾಗ್ವಾದ, ಚಿಂತನೆ . ಕೆಲವು ಜನ ಜ್ಞಾನಿಗಳು ತಾವಾಗಿಯೇ ಬೋಧೆ ಮಾಡಲು ಹೋಗುವುದಿಲ್ಲ. ಆಗ ಮುಮುಕ್ಷುಗಳು ಬೇಕೆಂತಲೇ ಪ್ರಶ್ನೆ ಕೇಳಿ ಅವರನ್ನು ಪ್ರಚೋದಿಸುವರು. ಆಗ ಅವರು ಪುಂಖಾನು ಪುಂಖವಾಗಿ ಉತ್ತರ ನೀಡುವರು. ಈ ವಾಕ್ ಯುದ್ಧ ಕೇಳುಗರಿಗೆ ಅಮೃತ ರಸಾಯನ. ಒಬ್ಬ ಸಂಗೀತ ವಿದ್ವಾಂಸರಿದ್ದರು . ಅವರು ಮನ ಬಂದಾಗ ಹಾಡುವವರು. ಹೊರಗೆ ಆಹ್ವಾನಿಸಿದರೆ ಬರುತ್ತಿರಲಿಲ್ಲ. ಓರ್ವ ಯುವಕ ಸಂಗೀತ ಪ್ರೇಮಿ. ಅವರ ಬಾಯಿಂದ ಆನಂದ ಭೈರವಿ ರಾಗ ಕೇಳುವ ಆಸೆ ಅವನಿಗೆ. ಹೋಗಿ ವಿನಂತಿ ಮಾಡಿಕೊಂಡ. ಅವರು ಹಾಡಲು ಒಪ್ಪಲಿಲ್ಲ. ಆಗ ಅವನು ಹೇಳಿದ "ಹೋಗಲಿ. ನಾನು ಹಾಡುತ್ತೇನೆ. ತಪ್ಪಿದ್ದರೆ ಸರಿಪಡಿಸಿ." ಎಂದು ಹಾಡತೊಡಗಿದರು. ಒಮ್ಮೆ ಅಪಸ್ವರ ಹಾಡಿದ ಗಾಯನ ಪಂಡಿತನಿಗೆ ಸಿಟ್ಟು ಬಂತು 'ಅಯ್ಯೋ ಮಂಕೆ.' ಅಪಸ್ವರದಲ್ಲಿ ಹಾಡುತ್ತಿಯಲ್ಲೊ. ಹೀಗೆ ಹಾಡಬೇಕು.' ಎಂದು ಲೀಲಾಜಾಲವಾಗಿ ಹಾಡತೊಡಗಿದ. ಸಂವಾದ ಗೋಷ್ಠಿಯಲ್ಲೂ ಹೀಗೆ ಜ್ಞಾನಿಗಳನ್ನು ಕೆರಳಿಸಿದರೆ ಅಮೋಘವಾದ ಸುಜ್ಞಾನದ ರಸಧಾರೆ ಹರಿಯುತ್ತದೆ .ಅನುಭವ ಮಂಟಪದ ಸಂವಾದದಲ್ಲಿ ಅಲ್ಲಮಪ್ರಭುಗಳು ಬೇಕಂತಲೇ ನಾಸ್ತಿಕರಾಗಿ ಪ್ರಶ್ನೆ ಕೇಳುವರು. ಮಹಾಜ್ಞಾನಿ ಸಿದ್ದರಾಮಯ್ಯನಿಗೆ ಇಷ್ಟಲಿಂಗದ ಅಗತ್ಯವು ಏನಿದೆ? ಎನ್ನುವರು. ಇವು ಅವರ ಅಂತಿಮ ನಿಲುವಲ್ಲ. ಗೋಷ್ಠಿಯನ್ನು ಪ್ರಚೋದಿಸಲು ಆಡುವ ಮಾತುಗಳು, ಜ್ಞಾನಿಗಳೊಡನೆ ವಾಗ್ವಾದ (ಬವರ) ಮಾಡಿ ಗೆದ್ದರೂ ಅಷ್ಟೇ , ಸೋತರೂ ಅಷ್ಟೇ. ಪ್ರತಿಫಲ ಜ್ಞಾನ! ಅದೇ ಕಳ್ಳನ ಭಾಷೆ ನಂಬಲಾದೀತೆ ? ಅವನು ಒಳಗೊಂದು ಹೊರಗೊಂದು ಮಾಡುವನು . ನಮ್ಮ ಲಿಂಗದೇವನ ಶರಣರಿಗೆ ತನು ದಾಸೋಹ ಮಾಡಿ ದೇಹ ಕೃಶವಾದಡೆ, ಧನ ದಾಸೋಹ ಮಾಡಿ ಆರ್ಥಿಕವಾಗಿ ದುರ್ಬಲನಾದಡೆ ಅದಕ್ಕಾಗಿ ದುಃಖ ಪಡಬೇಕಾಗಿಲ್ಲ. ಆ ದಾಸೋಹಿ ಲಿಂಗದೇವನಿಗೆ ಪೂಜೆಗಾಗಿ ಸಲ್ಲುವನು, ಎನ್ನುತ್ತಾರೆ ಮಹಾದಾಸೋಹಿ ಬಸವಣ್ಣನವರು. ಈ ವಚನವನ್ನು ಬಹುಶಃ ತಾಯಿ ನೀಲಾಂಬಿಕೆಯವರಿಗೆ ಧರ್ಮಪಿತರು

ಹೇಳಿರಬಹುದೆನಿಸುತ್ತದೆ. ಮಹಾಮನೆಯ ಜವಾಬ್ದಾರಿ ತೀರಾ ಹಿರಿದು . ಅನೇಕರು ದುಡಿಯುತ್ತಿರಬಹುದಾದರೂ ಮುಖ್ಯ ಪಾತ್ರಧಾರಿಗಳು ತಾಯಿ ನೀಲಾಂಬಿಕೆ ಮತ್ತು ಮಾತೆ ಅಕ್ಕನಾಗಲಾಂಬಿಕೆಯರು, ದಾಸೋಹಕ್ಕಾಗಿ ದುಡಿದು ತನು ದಣಿದು ದೇಹ ಕೃಶವಾಗಿ ತಾಯಿ ನೀಲಾಂಬಿಕೆ ಬಸವಳಿದಿರಬಹುದು. ಆಗ ಸಮಾಧಾನ ಮಾಡುತ್ತ ಶರಣರ ದಾಸೋಹಕ್ಕೆ ತನು ಸವೆದು ಬಡವಾದಡೆ ಅದು ಲಿಂಗಕಾಯವಾಗಿ ಲಿಂಗದೇವನಿಗೆ ಸಲ್ಲುವುದು ಎಂದು ಹೇಳಿರಬಹುದು. ಗುರುಬಸವಣ್ಣನವರ ಜೀವನದಲ್ಲಿ ಒಮ್ಮೆ ಆರ್ಥಿಕ ಸಂಕಷ್ಟ ಎದುರಾಗುವುದು. ಚಾಡಿಕೋರರ ಮಾತಿನಿಂದ ಸಂದೇಹಗೊಂಡ ಬಿಜ್ಜಳ ಒಮ್ಮೆ ಪ್ರಶ್ನಿಸಿದಾಗ ಇದರಿಂದ ನೊಂದ ಧರ್ಮಪಿತ ಬಸವಣ್ಣನವರು ಅಧಿಕಾರವನ್ನು ತೊರೆದು ತಮ್ಮ ಕುಟುಂಬ ಪರಿವಾರ ಸಹಿತ ಬಸವ ಕಲ್ಯಾಣ ಸಮೀಪದ ಬಲಕುಂದಿ ಬೆಟ್ಟದ ಬಳಿಗೆ ಹೋಗಿ ಇರುವರು ಎಲ್ಲೆಡೆಯಿಂದ ಶರಣ ಸಮೂಹ ಕಲ್ಯಾಣಕ್ಕೆ ಬಂದುದು ಅಲ್ಲಿ ಗುರು ಬಸವಣ್ಣನವರು ಇಲ್ಲವೆಂದು ತಿಳಿದು ಬಲಕುಂದಿ ಬೆಟ್ಟಕ್ಕೆ ಧಾವಿಸುವರು. ಅಲ್ಲಿ ಸೌಲಭ್ಯಗಳಿಲ್ಲ, ಆರ್ಥಿಕ ಸಂಕಷ್ಟ ಎರಗುತ್ತದೆ. ಬರುವ ಶರಣರಿಗೆ ಹೇಗೆ ದಾಸೋಹ ಮಾಡಿಸಬೇಕೆಂದು ತೋಚದಾದಾಗ ಧರ್ಮಪಿತರು "ಎನ್ನ ಧನ ಸವೆದಿದೆ ಬಡವನಾಗಿದ್ದೇನೆ, ನಿನ್ನ ಶರೀರ ಕೃಶವಾಗಿ ಬಡವಾಗಿದ್ದೀಯೆ. ಇರಲಿ. ಈ ಪರೀಕ್ಷೆ ಎಷ್ಟು ದಿವಸವೋ ಖಂಡಿತಾ ನಮ್ಮ ಬದುಕು ಲಿಂಗಾರ್ಪಿತವಾಗುತ್ತದೆ." ಎಂದು ತಾಯಿ ನೀಲಾಂಬಿಕೆಯವರನ್ನು ಸಾಂತ್ವನಿಸಿರಬಹುದು.

155. ಲಿಂಗವಂತನ ಒಡನಾಟ ಆಪ್ಯಾಯಮಾನ

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು,
ಶ್ರೀಗಂಧದ ಸನ್ನಿಧಿಯಲು ಪರಿಮಳವಾಗವೆ?
ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು.
ಲಿಂಗದೇವಯ್ಯಾ, ಸಿರಿಯಾಳನ ಸಾರಿರ್ದ ನರರೆಲ್ಲಾ ಸುರರಾದರೆ ?
ಬ.ವ. ದೀ.153.

ಬೆಟ್ಟದ ಮೇಲೆ ಕಾನನದೊಳಗೆ ಹಲವು ಬಗೆಯ ಗಿಡಮರಗಳು ಇರುತ್ತವೆ ಗಾಳಿ ಬೀಸಿದಾಗ ತೂಗಿ ತೊನೆಯುತ್ತವೆ, ಆದರೆ ಎಲ್ಲಕ್ಕೂ ಶ್ರೀಗಂಧದ ಗುಣ ಇರುವದಿಲ್ಲ. ಶ್ರೀಗಂಧದ ಗಿಡವಾದರೆ ಅದು ಉಜ್ಜಿದಾಗ ಪಕ್ಕದಲ್ಲಿ ಇರುವ ಗಿಡಕ್ಕೂ ಸುವಾಸನೆ ಬರುವದು. ಅದೇ ಈ ಜಗತ್ತಿನಲ್ಲಿ ಅಸಂಖ್ಯಾತ ಮನುಷ್ಯರಿರಬಹುದು. ಆದರೆ (ನಿಜ - genuine) ಲಿಂಗವಂತನು ಶ್ರೀಗಂಧದ ಗಿಡವಿದ್ದಂತೆ. ಅವನೊಡನೆ ಒಡನಾಡಿದರೆ ಒಡನಾಡಿದ ವ್ಯಕ್ತಿಗಳ ಪೂರ್ವದ ಗುಣಗಳು, ಅಜ್ಞಾನ, ಮೂಢ ನಂಬಿಕೆ,ಸಣ್ಣತನ. ದೌರ್ಬಲ್ಯ, ದುರ್ಗುಣ ಇತ್ಯಾದಿ ಅಳಿಯುವುವು. ಅದೇ ಸಿರಿಯಾಳನ ಜೀವನದಲ್ಲಿ ಇದು ಸಾಧ್ಯವಾಗಲಿಲ್ಲ. ಆತ ತಾನೊಬ್ಬನೇ ಕೈಲಾಸಕ್ಕೆ ಹೋದ. ತನ್ನ ಹೆಂಡತಿ ಮಕ್ಕಳನ್ನು ಮಾತ್ರ ಕರೆದೊಯ್ದ. ಇನ್ನಾರನ್ನು ಪರಿವರ್ತನೆ ಮಾಡಲಿಲ್ಲ, ಸುಧಾರಣೆ ಮಾಡಲಿಲ್ಲ, ಭಕ್ತಿ ಪಥಕ್ಕೆ ಕರೆತರಲಿಲ್ಲ. ಧರ್ಮಪಿತರು "ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು" ಎನ್ನುವುದರಲ್ಲಿ ತಮ್ಮ ಧರ್ಮಾನುಯಾಯಿಯ ಬಗ್ಗೆ ಎಂತಹ ವಿಶ್ವಾಸ ಇಟ್ಟಿದ್ದಾರೆ ಎನ್ನಿಸುವುದು. ಅವರ ಪರಿಕಲ್ಪನೆಯ ಲಿಂಗವಂತನು ದೇವಭಕ್ತ, ಏಕದೇವನಿಷ್ಠ, ತಾನು ಪರಿಶುದ್ಧನಾಗಿ ಸದ್ಗುಣಗಳಿಂದ ಶೋಭಿಸುತ್ತ ಇನ್ನಿತರರನ್ನು ಪರಿವರ್ತಿಸುವವನು. (ಇಂದಿನ ಲಿಂಗವಂತರು ತಾವು ಇನ್ನಿತರರನ್ನು ಪರಿವರ್ತಿಸುವವರಾಗದೆ ತಾವು ಹತ್ತು ಹಲವು ಪ್ರಭಾವಗಳಿಗೆ ಒಳಗಾದ ದುಃಸ್ಥಿತಿಯಲ್ಲಿರುವುದು ವಿಪರ್ಯಾಸವಲ್ಲವೆ?)

156. ಪರಿವರ್ತನೆ ಭಕ್ತನ ಕರ್ತವ್ಯ

ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು ನೋಡಿರೆ !
ಅವ್ವಾ ಚಂಗಳೆ, ನೀನಿದ್ದೇಳುಕೇರಿಯವರು
ಲಿಂಗದ ನೋಂಪಿಯ ನೋಂತರೆ ಹೇಳಾ ?
ಕೂಡಲಸಂಗಮದೇವಂಗೆ
ಚೀಲಾಳನೆಂಬ ಬಾಯಿಸವನಿಕ್ಕಿದರೆ, ಹೇಳಾ ! - ಬ. ವ.ದೀ. 157

ಪರುಷದ ಪಕ್ಕದಲ್ಲಿ ಕಬ್ಬಿಣವಿದ್ದರೆ ಅದು ಹೊನ್ನಾಗುತ್ತದೆ . ನೋಡು ತಾಯಿ ಚೆಂಗಳೆ . ಒಂದು ಜಡವಾದ ವಸ್ತುವಿನಲ್ಲಿ ಪರಿವರ್ತನಶೀಲ ಗುಣವಿದೆ. ನೀನು ಶಿವಭಕ್ತೆ, ಇಡೀ ಊರನ್ನು ಪರಿವರ್ತಿಸದಿದ್ದರಷ್ಟೇ, ಕಡೆಗೆ ನಿನ್ನ ಕೇರಿಯ ಅಕ್ಕಪಕ್ಕದ ಏಳು ಕೇರಿಯ ಜನರನ್ನಾದರೂ ಪರಿವರ್ತಿಸಿ,

ಲಿಂಗದ ನೋಂಪಿ (ವ್ರತ)ಯನ್ನು ಹಿಡಿಯುವಂತೆ ಮಾಡಿದೆಯಾ? ನಿನ್ನದು ಅನುಕರಣೀಯ ಭಕ್ತಿಯೆ? ನಿನ್ನ ಬಿಟ್ಟು ಮತ್ತೆ ಯಾರಾದರೂ ತಮ್ಮ ಮಗನನ್ನು ಕಡಿದು ಬಾ(ಯಿ)ನ ಮಾಡಿಟ್ಟರೆ? ನಿಜವಾದ ಭಕ್ತಿಯು ಅಹಿಂಸಾತ್ಮಕವಾಗಿ, ಅನುಕರಣೀಯವಾಗಿ, ಪರಿವರ್ತನ ಶೀಲವಾಗಿ ಇರಬೇಕು. ಬಾಯಿನ= ಬಾಗಿನ = ಕೊಡುಗೆ. ಬಾನ = ಅಡಿಗೆ, ಅನ್ನ

157. ಶರಣನೇ ಜಾಣ.

ಗೀತವ ಬಲ್ಲಾತ ಜಾಣನಲ್ಲ; ಮಾತು ಬಲ್ಲಾತ ಜಾಣನಲ್ಲ,
ಜಾಣನು ಜಾಣನು-
ಆತ ಜಾಣನು; ಲಿಂಗವ ನೆರೆನಂಬಿದಾತ;
ಆತ ಜಾಣನು; ಜಂಗಮಕ್ಕೆ ಧನವ ಸವೆಸುವಾತ;
ಆತ ಜಾಣನು; ಜವನ ಬಾಯಲು ಬಾಲವ ಕೊಯ್ದು ಹೋದಾತ;
ಆತ ಜಾಣನು; ನಮ್ಮ ಲಿಂಗದೇವನ ಶರಣನು! - ಬ.ವ.ದೀ.155

ಭಗವದ್ಗೀತೆಯನ್ನು ಬಾಯಿಪಾಠ ಮಾಡಿ,ಪುಂಖಾನುಪುಂಖವಾಗಿ ಶ್ಲೋಕಗಳನ್ನು ಉಚ್ಚರಿಸುವವನು ಜಾಣನೆ? ನಿರರ್ಗಳವಾಗಿ ಮಾತನಾಡಬಲ್ಲ ವಾಗ್ಮಿಯು ಜಾಣನೆ? ಅಲ್ಲಲ್ಲ; ಜಾಣನು ಆತ ಲಿಂಗವ ನೆರೆನಂಬಿದಾತ. ಸೃಷ್ಟಿಕರ್ತನನ್ನು ದೃಢವಾಗಿ ನಂಬಿದವನು ಜಾಣನು. ಗುರುವು ದೀಕ್ಷೆ ಮಾಡಿ ಸೃಷ್ಟಿಕರ್ತ ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ನಿಷ್ಠೆಯಿಂದ ಪೂಜಿಸು ಎಂದು ಹೇಳುತ್ತಾನೆ. ಇದನ್ನು ನಂಬದೆ ಕಂಡಕಂಡ ದೈವಗಳಿಗೆ ಹೋಗಿ ನಮಿಸುವ ಭಕ್ತನು ನಿಷ್ಠಾವಂತ ಹೇಗಾಗುವನು? ಜ್ಯೋತಿಷ್ಯ, ಪಂಚಾಂಗಗಳನ್ನು ಅವಲಂಬಿಸುವವನು ಜಾಣನು ಹೇಗೆ? ಸುಖವೇ ಬರಲಿ ಕಷ್ಟವೇ ಬರಲಿ ಲಿಂಗದೇವನನ್ನು ದೃಢವಾಗಿ ನಂಬುವವ ಪ್ರಾಜ್ಞನು. ಆತ ಜಾಣನು - ಜಂಗಮಕ್ಕೆ ಧನವ ಸವೆಸುವಾತ. ಲಿಂಗಾಯತ ಧರ್ಮದ ತ್ರಿವಿಧ ಪೂಜ್ಯ ವಸ್ತುಗಳಾದ ಗುರು -ಲಿಂಗ-ಜಂಗಮಕ್ಕೆ ಮಾತ್ರ ಲಿಂಗಾಯತನು ತನ್ನ ಸಂಪತ್ತು ವಿನಿಯೋಗಿಸಬೇಕು. ಅದು ಬಿಟ್ಟು ಯಜ್ಞ- ಯಾಗಾದಿಗಳಿಗೆ ವ್ಯಯ (ಖರ್ಚು) ಮಾಡಬಾರದು. ಅದು ಬೆಲೆ ಬಾಳುವ ಆಪ್ಯಾಯನದ ವಸ್ತುಗಳನ್ನು ನಾಶಮಾಡುವ ಕ್ರಿಯೆ! ಪ್ರಾಣ ಬಲಿ ಕೊಡುವ ಜಾತ್ರೆಗಳಿಗೆ ದೇಣಿಗೆ ಕೊಡಬಾರದು. ಆ ಪ್ರಾಣವಧೆಯಿಂದ ಹಿಂಸೆಯಾಗುವುದು. ಅದರಲ್ಲಿ ಈ ದಾನಿಗೂ ಪಾಪದ ಫಲ ಪ್ರಾಪ್ತಿಯಾಗುವುದು. ಶರಣನ ಸಂಪತ್ತು ಮಾನವೀಯ ಕಾರ್ಯ, ಜಂಗಮ ತೃಪ್ತಿಗೆ ಮಾತ್ರ ವಿನಿಯೋಗವಾಗಬೇಕು.

ಆತ ಜಾಣನು- ಜವನ ಬಾಯಲು ಬಾಲವ ಕೊಯ್ದು ಹೋದಾತ! ಜವ ಎಂದರೆ ಯಮ ಅಂದರೆ ಸಾವು. ಇದರ ಬಾಲವನ್ನೇ ಕೊಯ್ದವನು ಎಂದರೆ ಸಾವಿನ ಭಯವನ್ನೇ ಗೆದ್ದವನು. ಇರುವವರೆಗೆ ಉತ್ತಮವಾದ ಜೀವನ ನಡೆಸಬೇಕು, ಸಾವಿನ ಬಗ್ಗೆ ಭಯಪಡದೆ ಅದನ್ನು ಸಮಾಧಾನದಿಂದ ಸ್ವಾಗತಿಸಬೇಕು. ಇದು ಯಾರಿಗೆ ಸಾಧ್ಯ? ಲಿಂಗವ ನೆರೆನಂಬಿದವರಿಗೆ ಜಂಗಮಕ್ಕೆ ಧನ ಸವೆಸಿದವರಿಗೆ ಮಾತ್ರ!

ಲಿಂಗಾಯತರು ತಮ್ಮ ಧರ್ಮವನ್ನು ಮರೆತಿದ್ದಾರೆ, ಮರೆಯುತ್ತಿದ್ದಾರೆ ಎಂಬ ಸಂಕಟಕ್ಕಾಗಿ ನಾವು ಬೇರೆ ಬೇರೆ ರಾಜ್ಯಗಳಲ್ಲಿ ಸಮ್ಮೇಳವನ್ನು ಹಾಕಿಕೊಳ್ಳುವ ಪ್ರಯತ್ನ(ಪ್ರಯಾಸ) ಮಾಡುತ್ತೇವೆ. ಅಲ್ಲಿರುವ ಲಿಂಗಾಯತರನ್ನು ವಿಳಾಸ ಪಡೆದು, ಹುಡುಕಿ ಆಹ್ವಾನಿಸಲು ನಮ್ಮ ಸ್ವಾಮೀಜಿಗಳು ಅಥವಾ ಕಾರ್ಯಕರ್ತರು ಭೇಟಿಯಾಗಬಯಸುತ್ತಾರೆ. ದೂರದ ದೇಶ, ಸ್ವಧರ್ಮೀಯರು ಭೇಟಿಯಾಗುವುದೇ ದುರ್ಲಭ. ಅಂಥ ಅವಕಾಶ ಸಿಕ್ಕಾಗ ಎಷ್ಟು ಸಂತೋಷಪಡಬೇಕು ! "ಲಕ್ಷಗಾವುದ ದೂರವಾದರೆಯೂ ಹೋಗಿ ಭಕ್ತಭಕ್ತನ ಕಾಂಬುದು ಸದಾಚಾರ." ಎನ್ನುತ್ತದೆ ಪಿತರ ವಾಣಿ. ಜೀವನಪರ್ಯಂತರ ದುಡಿದುದೆಲ್ಲವನ್ನು ಮಕ್ಕಳು - ಮರಿಗಳಿಗೇ ಮಾಡಿರುತ್ತಾರೆ . ತನ್ನ ಧರ್ಮಕ್ಕಾಗಿ ಮಾಡುವ ಭಾಗ್ಯ ಬಂದಿದೆಯಲ್ಲಾ ಎಂದು "ಬನ್ನಿ ಸಂತೋಷ . ದೂರದ ದೇಶದಲ್ಲಿ ಸ್ವಧರ್ಮೀಯರನ್ನು ಕಾಣುವುದೇ ಸಂತೋಷದ ಸಂಗತಿ . ನಮ್ಮ ಕೈಲಾದಷ್ಟು ಕೊಡೋಣ ಎನ್ನಬಾರದೇ? ತಮ್ಮ ಮಕ್ಕಳಿಗೂ, ನೀವು ನಮ್ಮ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಬೋಧಿಸಬೇಕು. ಅದು ಬಿಟ್ಟು "ನಮ್ಮ ಮನೆಗೆ ಬರಬೇಡಿ ನಾವು ಊರಲ್ಲಿ ಇರಲ್ಲ." ಎನ್ನುವುದು ಎಂಥಾ ಧರ್ಮಾಭಿಮಾನ! ತಾಯಿಯು ಟೈಟ್ ಪ್ಯಾಂಟ್ ಹಾಕಿದರೆ, ಮಕ್ಕಳು ಬಿಕಿನಿ

ಹಾಕಿಕೊಂಡು ಅಡ್ಡಾಡದೆ ಇರುವರೆ? ಕರ್ನಾಟಕದಿಂದ ಹೋದ ಹಿರಿಯರದೇ ಈ ಪಾಡಾದರೆ ಇನ್ನು ಹೊರರಾಜ್ಯಗಳಲ್ಲಿ ನೆಲೆಸಿರುವ ಮಕ್ಕಳದು -ದೇವರೆ ಗತಿ! ಇಂಥ ಅನುಭವಗಳಾದಾಗ ಸಮಾಜಕ್ಕಾಗಿ ದುಡಿಯುವವನು ಮೂರ್ಖ ಎನ್ನಿಸಿ , ಮನಸ್ಸು ಮುದುಡುತ್ತದೆ. ಆದರೆ ಅದೇ ಊರಲ್ಲೆ ಅಥವಾ ಪರವೂರಲ್ಲೋ "ಎಂಥಾ ಭಾಗ್ಯ ಕಲ್ಪಿಸಿಕೊಟ್ಟಿರಿ, ಕರ್ನಾಟಕದಿಂದ ಬಂದು ನೆಲೆಸಿ ಧರ್ಮ - ಸಮಾಜಗಳ ಸಂಪರ್ಕ ತಪ್ಪಿದ ನಮಗೆ ನೀವು ಬಂದುದು ಅತ್ಯಂತ ಸಂತೋಷದ ಸಂಗತಿ." ಎಂದು ಹೋದವರಿಗೆ ಕರೆದು ಉಪಚರಿಸಿದ್ದೇ ಅಲ್ಲದೆ ಉದಾರವಾಗಿ ಕಾಣಿಕೆಯನ್ನೂ ಕೆಲವರು ಕೊಟ್ಟಾಗ ನಿರಾಶೆಯ ಕಾರ್ಮೋಡ ಸರಿದು ಸಂತಸದ ಬೆಳಕು ಮೂಡುವುದು. ಅದಕ್ಕೇ ಸೋಮೇಶ್ವರ ಶತಕದಲ್ಲಿ ಹೇಳಿರುವುದು, ಚರಿಪ ಅರಣ್ಯದ ಪಕ್ಷಿಗೆ ಒಂದು ತರುವು ಗೊಡ್ಡಾಗಲ್ ಫಲಂ ತೀವಿದ ಮರಗಳ್ ಪುಟ್ಟವೆ ? ಪುಷ್ಪವೊಂದು ಬಳಲಲ್ ಭೃಂಗಕ್ಕೆ ಪೂವಿಲ್ಲೆ? ಎಂದು.

158. ಲೇಸೆನಿಸಿಕೊಂಡ ಸಾರ್ಥಕ ಬದುಕು

ಲೇಸೆನಿಸಿಕೊಂಡು ಅಯ್ದು ದಿನ ಬದುಕಿದಡೇನು?
ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ಮೂರು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ಎರಡು ದಿನ ಬದುಕಿದಡೇನು ?
ಲಿಂಗದೇವನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ ? - ಬ.ವ.ದೀ.156

ಒಳ್ಳೆಯವನು ,ಒಳ್ಳೆಯ ಜೀವನ ನಡೆಸಿದ ಎಂದು ಎಲ್ಲರೂ ಮೆಚ್ಚುವಂತೆ 5 ದಿನ ,4 ದಿನ, 3ದಿನ, 2ದಿನ, ಬದುಕಿದರೇನಂತೆ ; ಅವನದು ಸಾರ್ಥಕದ ಬದುಕು. ಕಡೆಗೆ ಲೇಸಾದ ಒಂದೇ ದಿನದ ಬದುಕೂ ಅರ್ಥಗರ್ಭಿತ, ಸಾರ್ಥಕ. ಆದರೆ ಯಾರ ಮತ್ತು ಯಾವ ಮಾನದಂಡದಿಂದ ಲೇಸನ್ನು ನಿರ್ಧರಿಸಬೇಕು? ಲಿಂಗದೇವನ ಶರಣರ ವಚನವನ್ನು (ಅಭಿಪ್ರಾಯವನ್ನು) ಮಾನದಂಡವಾಗಿ ಇಟ್ಟುಕೊಳ್ಳಬೇಕು ಒಮ್ಮೆ ಒಂದು ಶಾಲಾ ಮೈದಾನದಲ್ಲಿ ಪ್ರವಚನ ಮಾಡುತ್ತಲಿದ್ದೆ. ಅದರ ಪಕ್ಕದಲ್ಲೇ ಒಂದು ಕ್ಲಬ್ ಇದ್ದಿತು. ಓರ್ವ ವ್ಯಕ್ತಿ ಇಸ್ಪೇಟ್ ಕ್ಲಬ್‌ನ ಕಾಯಂ ಸದಸ್ಯ. ಸ್ಕೂಟರ್ ಮೇಲೆ ಹೋಗುತ್ತಿದ್ದವನು ಧ್ವನಿ ಕೇಳಿ ನಿಂತು ಪ್ರವಚನ ಕೇಳಿದ. ನಂತರ ಕುಳಿತ ಪರಿವರ್ತನೆಗೊಂಡ. ಆದರೆ ಆತನ ಇಸ್ಪೇಟ್ ಗೆಳೆಯರು, ಅಯ್ಯೋ, ನಮ್ಮ ಮಿತ್ರ ಕೆಟ್ಟು ಹೋದನಲ್ಲಾ ಎಂದು ಚಟಪಟಿಸಿದರು ಏಕೆಂದರೆ ಚಟಗಾರರ ದೃಷ್ಟಿಯಲ್ಲಿ ಅವರಿಗೆ ಸಾಂಗತ್ಯ ಕೊಡುವವರೇ ಒಳ್ಳೆಯವರು! ಪ್ರಾಜ್ಞರಾದ ಶರಣರ ಕೈಯಿಂದ ಲೇಸು ಎನ್ನಿಸಿಕೊಳ್ಳುವವನೇ ಉತ್ತಮನು.

159. ಮರ್ತ್ಯಲೋಕದ ಮಹಿಮೆ

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,ಲಿಂಗದೇವಾ. - ಬ.ವ.ದೀ.157

ಇದು ಬಸವಣ್ಣನವರ ವಿಶ್ವಸಂದೇಶ (Universal Message) ಅಂತೆಯೇ ಇದು ಅತ್ಯಂತ ಜನಪ್ರಿಯ ವಚನ. ಮರ್ತ್ಯಲೋಕ -ನಾವು ವಾಸಿಸುತ್ತಿರುವ ಭೂಮಿ. ಇದು ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಪರಮಾತ್ಮನ ಸೃಷ್ಟಿ. ಇಲ್ಲಿ ಅಚರ-ಜಡ ಮತ್ತು ಸಚರ - ಚೈತನ್ಯ ಎರಡೂ ಉಂಟು ; ಆತ್ಮಗಳು ಚೈತನ್ಯ ಸ್ವರೂಪಿಗಳು ಆತ್ಮನಿಗೆ ಸ್ಥೂಲ -ಸೂಕ್ಷ್ಮ - ಕಾರಣ ಎಂಬ 3 ಶರೀರಗಳು ಅವುಗಳಲ್ಲಿ ಕಾರ್ಮಿಕ -ಮಾಯಾ- ಆಣವ ಎಂಬ 3 ಮಲಗಳು ನೆಲೆಸಿರುತ್ತವೆ. ಇದರಿಂದಾಗಿ ಶುದ್ಧ ಚೈತನ್ಯವಾದ ಲಿಂಗದೇವನಿಂದ ಬೇರೆಯಾಗಿ ಅಂಗ (ಆತ್ಮ) ವು ಭವದಲ್ಲಿ ಸಂಚರಿಸುತ್ತದೆ. ಈ ಕೊಳೆಯನ್ನು ನಿರ್ಮೂಲನೆ ಮಾಡಿ, ತ್ರೈಶರೀರಗಳನ್ನು ಶುದ್ಧೀಕರಿಸಿ ಜೀವಾತ್ಮನೆಂಬ ಬದ್ಧ- ಅಶುದ್ಧ ಚೈತನ್ಯವನ್ನು ಬುದ್ಧ - ಶುದ್ಧ ಚೈತನ್ಯವನ್ನಾಗಿ ಮಾಡುವ ಕಮ್ಮಟ, ಕಾರ್ಯಾಗಾರ (Work - shop) ಯಾವುದು ? ಈ ಮರ್ತ್ಯ ಲೋಕ. ಆತ್ಮರುಗಳನ್ನು ಪರಿಪಕ್ವಗೊಳಿಸುವ ಈ ಕಮ್ಮಟದಲ್ಲೇ ವ್ಯಕ್ತಿಯು ಪೂರ್ಣತ್ವ (perfection) ಸಾಧಿಸ ಬೇಕು, ಕೀಟ್ಸ ಕವಿ ಹೇಳುವಂತೆ " This world is a vale of soul-making."

ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ಎಂಬ ವಾಕ್ಯಕ್ಕೆ ಅನೇಕರು ಇಲ್ಲಿ ಅಂದರೆ

ಮರ್ತ್ಯಲೋಕದಲ್ಲಿ ಅಲ್ಲಿ ಅಂದರೆ ಅಮರ್ತ್ಯಲೋಕ ಅರ್ಥಾತ್ ಶಿವಲೋಕ, ವೈಕುಂಠ, ಸ್ವರ್ಗ ಎಂದು ಇತ್ಯಾದಿ ಅರ್ಥಮಾಡುತ್ತಾರೆ. ಗುರು ಬಸವಣ್ಣನವರು ಹಲವು ಲೋಕಗಳ ಅಸ್ತಿತ್ವವನ್ನು ನಂಬಿಯೇ ಇಲ್ಲ ಎಂಬುವದು ಅವರ ಹಲವಾರು ವಚನಗಳಲ್ಲಿ ವಿದಿತವಾಗಿದೆ. ಈ ಲೋಕದೊಳಗೇ ಅನಂತಲೋಕ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾದರೆ ಇಲ್ಲಿ ಅಲ್ಲಿ ಎಂಬುದರ ಅರ್ಥವೇನು? ಇಲ್ಲಿ ಅಂದರೆ ಲೌಕಿಕದಲ್ಲಿ, ಅಲ್ಲಿ ಅಂದರೆ ಲಿಂಗದೇವನಲ್ಲಿ. ಮರ್ತ್ಯಲೋಕದ ಜೀವನವನ್ನು ಹೇಯವೆಂದು, ಬಾಧಕವೆಂದು ಭಾವಿಸದೆ ಐಹಿಕ ಜೀವನವನ್ನು ದೇವನನ್ನೊಲಿಸುವ ಸಾಧನವಾಗಿ ಮಾಡಿಕೊಳ್ಳಬೇಕು. ಆಗ ಇಲ್ಲಿ ಸಲ್ಲುವಂತೆ ಆಗುವುದು. ಆಗ ಅಂಥವರು ದೇವನಲ್ಲೂ ಸಲ್ಲುವರು.

ಒಂದು ಪ್ರಶ್ನೆ ಏಳುತ್ತದೆ. ಸಾಮಾನ್ಯವಾಗಿ ಶರಣರು, ಜ್ಞಾನಿಗಳು ಸಂಪ್ರದಾಯ ಪತಿತರಾಗಿ ಸಾಗದೆ ಲೋಕವಿರೋಧಿಗಳಾಗಿ ಬಾಳುವರು. ಅಂದಾಗ ಅದೆಂತು ಇಲ್ಲಿ ಸಲ್ಲಿದವರಾಗುವರು? ಉದಾ: ಸೋಕ್ರತೀಸ, ಏಸು, ಮುಂತಾದವರು. ಸಂಪ್ರದಾಯವಾದಿಗಳು ತಮ್ಮ ಕ್ರೂರ ಹಿಡಿತವು ಸಮಾಜವನ್ನು ಆಳಬೇಕು ಎಂದಾಗ ಅದನ್ನು ವಿರೋಧಿಸಿದವರು ಲೋಕವಿರೋಧಿಗಳಾಗಬಹುದು ಆದರೆ ಒಂದು ಪ್ರಾಜ್ಞ ಸಮೂಹ ಅಂತ ಇರುತ್ತದೆ ಮತ್ತು ಜನ ಸಮುದಾಯ ಎಂಬ ಒಂದು ಪ್ರಜ್ಞೆ ಇರುತ್ತದೆ. ಅದು ಸತ್ಯವನ್ನೇ ಮೆಚ್ಚಿಕೊಳ್ಳುತ್ತದೆ. ಅದನ್ನೆ ಲಿಂಗದೇವನ ಶರಣರ ವಚನದಲ್ಲಿ ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ? ಎಂದು ಗುರು ಬಸವಣ್ಣನವರು ನುಡಿಯುವುದು.

160.ಶರಣರಿಲ್ಲದ ಊರು ನರವಿಂಧ್ಯ

ಶಿವ ಚಿಂತೆ ಶಿವಜ್ಞಾನವಿಲ್ಲದ ಮನುಜರು
ಸಗಣಿಕ್ಕೆ ಸಾಸಿರ ಹುಳು ಹುಟ್ಟವೆ, ದೇವಾ ?
ಕಾಡಮೃಗವೊಂದಾಗಿರಲಾರವೆ, ದೇವಾ ?
ಊರಮೃಗವೊಂದಾಗಿರಲಾರವೆ, ದೇವಾ ?
ನಮ್ಮ ಲಿಂಗದೇವನ ಶರಣರಿಲ್ಲದ ಊರು, ದೇಶ -
ವನವಾಸ, ನರವಿಂಧ್ಯ ಕಾಣಿರಣ್ಣಾ. ಬ.ವ.ದೀ.159

ಕೆಲವು ಜನರು ಬಾಳುವ ರೀತಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಧರ್ಮದ ಸ್ಪರ್ಶವೇ ಇಲ್ಲದಂತೆ ಬರೀ ಉಣ್ಣುವುದು, ತಿನ್ನುವುದು, ಉಡುವುದು, ತೊಡುವುದು, ಮಜಾಮಾಡುವದು ಸುಖಭೋಗಗಳನ್ನು ಅನುಭವಿಸುವುದು - ಇದರಲ್ಲಿಯೆ ಆಸಕ್ತರಾಗಿರುವರು. ಜೀವನ ಅಂದರೆ ಏನು? ಸಾವಿನ ಆಚೆ ಏನಿದೆ? ಜಗತ್ತಿಗೆ ಒಬ್ಬ ಕರ್ತನಿದ್ದಾನೆಯೆ? ಮುಂತಾದ ಯಾವ ಚಿಂತನೆಯನ್ನೂ ಅವರು ಮಾಡರು. ಇಂಥವರನ್ನು ಕಂಡು ವಿಸ್ಮಿತರಾಗಿ ಗುರುಬಸವಣ್ಣನವರು ಹೇಳುತ್ತಾರೆ "ಶಿವಚಿಂತೆ ಶಿವಜ್ಞಾನ -ವಿಲ್ಲದ ಮನುಜರು." ಎಂಬುದಾಗಿ. ಮೊದಲು ದೇವನ ಬಗ್ಗೆ ಚಿಂತನೆ ಮಾಡಬೇಕು. ನಂತರ ಆಳವಾದ ಜ್ಞಾನ ಪಡೆಯಬೇಕು. ಎರಡೂ ಇಲ್ಲದಿದ್ದರೆ ಹೇಗೆ? ಅಂಥ ಜನರು ಸಗಣಿಯಲ್ಲಿ ಹುಟ್ಟುವ ಸಾವಿರಾರು ಹುಳಗಳಂತೆ. ಅವುಗಳಿಗೆ ಯಾವ ಪರಿಜ್ಞಾನವು ಇಲ್ಲ, ಹುಟ್ಟುತ್ತವೆ ಸಗಣಿಯಲ್ಲಿ ಹೊರಳಾಡುತ್ತವೆ, ಅಲ್ಲೇ ಸಾಯುತ್ತವೆ. ಹಾಗೆ ಕೇವಲ ಸುಖಭೋಗಾಸ್ತಕರಾದ ಜನರು ವಿಷಯವೆಂಬ ಸಗಣಿಯಲ್ಲಿ ಸಿಕ್ಕಿ ಹೊರಳಾಡುವ ಹುಳಗಳಂತೆ!

ಛೇ , ಛೇ, ಗುರುಬಸವಣ್ಣನವರು ಇಷ್ಟು ಟೀಕಿಸಬಾರದಿತ್ತು. ವಿಷಯಾಸಕ್ತ ಮಾನವರನ್ನು ಸಗಣಿಯ ಹುಳಕ್ಕೆ ಹೋಲಿಸಬಾರದಿತ್ತು ಎಂದು ಆಕ್ಷೇಪಿಸಿ, 'ಮಾನವ ಬುದ್ಧಿ ಜೀವಿ. ಹೇಗೆ ಮನೆ ಕಟ್ಟುತ್ತಾನೆ. ಎಷ್ಟು ಅಲಂಕಾರ ಮಾಡಿಕೊಳ್ಳುತ್ತಾನೆ. ಎಷ್ಟು ಚಂದವಾಗಿ ಬಟ್ಟೆ ತೊಡುತ್ತಾನೆ, ಎಂತೆಂಥ ಸಂಶೋಧನೆಗಳನ್ನು ಮಾಡುತ್ತಿದ್ದಾನೆ" ಎಂದು ಹೇಳಬಹುದು. ಅದಕ್ಕೆ ಮರು ಪ್ರಶ್ನಿಸುತ್ತಾರೆ. "ಕಾಡುಮೃಗಗಳು ಅದೇ ರೀತಿ ಬಾಳುವುದಿಲ್ಲವೆ? ಊರ ಮೃಗಗಳು ಹಾಗೆಯೆ ಬಾಳುವದಿಲ್ಲವೆ? ಗೀಜಗನು ಗೂಡುಕಟ್ಟುತ್ತದೆ. ಅಷ್ಟು ಚನ್ನಾಗಿ ಮನುಷ್ಯನಿಗೆ ಮನೆ ಕಟ್ಟಲು ಬರುವುದೆ? ನವಿಲು ಎಷ್ಟು ಚಂದದ ವೇಷಭೂಷಣ ಹೊಂದಿರುತ್ತದೆ ಅಷ್ಟು ಚನ್ನಾಗಿ ಅಲಂಕರಿಸಿಕೊಳ್ಳಲು ಹೆಂಗಳೆಯರಿಗೆ ಸಾಧ್ಯವೆ? ಕಾಡಿನ ಪ್ರಾಣಿಗಳು, ಊರ ಪ್ರಾಣಿಗಳಿಗಿಂತಲೂ ನಿಯತ್ತು ರಹಿತವಾಗಿ ಬದುಕಿದರೆ ಏನು ಪ್ರಯೋಜನ. ಲಿಂಗದೇವನ ಶರಣರು ಯಾವ ಊರಲ್ಲಿ ಇರುವುದಿಲ್ಲವೋ ಎಲ್ಲಿ ಪೂಜಾದಿ ಕಾರ್ಯಗಳಿಲ್ಲದೆ ಸಚ್ಚಿಂತನೆ ನಡೆಯುವದಿಲ್ಲವೋ ಅಂಥ ಊರುಗಳು, ದೇಶಗಳು ನರರು ವಾಸಮಾಡುವ ಕಾಡಿನಂತೆ. ಒಂದು ಕಡೆ ಎಮರ್ಸನ್ ಎನ್ನುವ ಜ್ಞಾನಿ ಹೇಳುತ್ತಾನೆ." ಒಂದು ದೇಶದ ಭವ್ಯತೆ ಇರುವುದು ಅಲ್ಲಿಯ ನಗರಗಳಿಂದಲ್ಲ

ಬೃಹತ್ ಉದ್ಯಮಗಳಿಂದಲ್ಲ ಅದು ಎಂಥಾ ಜನಾಂಗವನ್ನು ನಿರ್ಮಿಸಿದೆ ಎಂಬುದರಲ್ಲಿದೆ." ಗುರುಬಸವಣ್ಣನವರ ಪರಿಕಲ್ಪನೆಯಲ್ಲಿ ಶರಣ ಎಂದರೆ ಒಬ್ಬ ಪರಿಪೂರ್ಣ ಮಾನವ, ಪ್ರಜ್ಞಾವಂತ ನಾಗರಿಕ. ಅಂಥವರಿಂದಲೇ ಊರಿಗೆ, ದೇಶಕ್ಕೆ ಶೋಭೆ.

161.ಸೇವೆಯಿಲ್ಲದ ಜೀವನ ನಿರರ್ಥಕ

ಹೊತ್ತಾರೆ ಎದ್ದು ಲಿಂಗದೇವನ
ದೃಷ್ಟಿಯಾರೆ ನೋಡದವನ ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ?
ಕರ್ತೃ ಲಿಂಗದೇವಾ,
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ? ಬ.ವ.ದೀ.156

ಮನುಷ್ಯನ ದಿನಚರಿ ಸೃಷ್ಟಿಕರ್ತ ಲಿಂಗದೇವನಿಗೆ ಕೃತಜ್ಞತೆ ಸಲ್ಲಿಸುವುದರೊಡನೆ ಆರಂಭವಾಗಬೇಕು. ಎದ್ದತಕ್ಷಣ ಪ್ರಾಣಿಯಂತೆ ತಿನ್ನುವುದು ಶೋಭೆಯಲ್ಲ. ಸುಪ್ರಭಾತದಲ್ಲಿ ಎದ್ದು ಶೌಚ, ಸ್ನಾನಾದಿ ಕ್ರಿಯೆಗಳನ್ನು ಪೂರೈಸಿ ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು ಪೂಜಿಸಿ, ದೃಷ್ಟಿಯಾರೆ ತ್ರಾಟಕಯೋಗದ ಮೂಲಕ ನೋಡಬೇಕು. ಹೀಗೆ ಮಾಡದವನ ಸಂಸಾರ ಜೀವನಕ್ಕೆ ಏನು ಅರ್ಥವಿದೆ? ಉಳಿದ ಪ್ರಾಣಿಗಳು, ಕ್ರಿಮಿಕೀಟಗಳು ಸಹ ಸಂಸಾರ ಮಾಡುತ್ತವೆ, ಸಂತಾನವನ್ನು ಪಡೆಯುತ್ತವೆ. ಅಂಥವನು ಬಾಳುವ ಹೆಣ, ಬೀಳುವ ಹೆಣ. ಉಸಿರಾಡುವ ಚೀಲ, ಅನ್ನತುಂಬಿಕೊಳ್ಳುವ ಚೀಲ. ನಡೆವ ಹೆಣ, ನುಡಿವ ಹಣ! ಇಂಥವನ ಬದುಕಿಗೆ ಅರ್ಥವೇನಿದೆ, ಸಾರ್ಥಕತೆ ಏನಿದೆ? ಕರ್ತನಾದ ದೇವರೇ, ಒಂದು ನಿನ್ನನ್ನು ಆರಾಧಿಸುವುದು ಎರಡನೆಯದಾಗಿ ನಿರಾಕಾರನಾದ ನಿನ್ನಸಾಕಾರ ಮುಖವಾದ ಸಮಾಜದ ಸೇವೆ ಮಾಡುವುದು - ಇವೆರಡೂ ಇಲ್ಲದ ಮನುಷ್ಯನ ಸಂಸಾರ ಜೀವನಕ್ಕೆ, ಐಹಿಕ ಬದುಕಿಗೆ ಅರ್ಥವೇ ಇಲ್ಲ!

162.ಮನುಷ್ಯನ ಬೆಲೆ ಎಷ್ಟು?

ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ
ನೆಲನಾಳ್ವನ ಹೆಣನೆಂದಡೆ
ಒಂದಡಿಕೆಗೆ ಕೊಂಬುವರಿಲ್ಲ ನೋಡಯ್ಯಾ!
ಮೊಲನಿಂದ ಕರಕಷ್ಟ ನರನ ಬಾಳುವೆ !
ಸಲೆ ನಂಬೊ ನಮ್ಮ ಲಿಂಗದೇವನ. ಬ.ವ.ದೀ.160

ಒಂದು ಮೊಲವನ್ನು ಬೇಟೆಯಾಡಿ ವ್ಯಾಧನು ತಂದು ಮಾರುಕಟ್ಟೆಯಲ್ಲಿ ಇಟ್ಟರೆ ಜನರು ಒಂದು ಹಾಗದಷ್ಟಾದರೂ ಹಣಕೊಟ್ಟು ಕೊಳ್ಳುವರು. ನೆಲವನ್ನಾಳುವ ಅರಸನು ಸತ್ತರೆ ಆತನ ಹೆಣವನ್ನು ನಗರ ಮಧ್ಯದಲ್ಲಿಟ್ಟರೆ ಒಂದು ಅಡಕೆಯನ್ನಾದರೂ ಕೊಟ್ಟು ಕೊಳ್ಳುವುದಿರಲಿ ಚೆನ್ನಾಗಿ ಬೈಯುವರು. "ನಗರ ಮಧ್ಯೆ ಯಾರಾದರೂ ಹೆಣವನ್ನು ಇಟ್ಟುಕೊಂಡು ಕೂಡುವರೆ?" ಎಂದು ಪ್ರಶ್ನಿಸುವರು. "ಇದು ಸಾಮಾನ್ಯ ಶವವಲ್ಲ ನೆಲವನ್ನಾಳಿದ ಅರಸನ ಹೆಣ" ಎಂದರೆ, "ಯಾರದಾದರೇನು ಸತ್ತ ನಂತರ ಆ ದೇಹಕ್ಕೆ ಬೆಲೆಯುಂಟೆ?" ಎಂದು ಅಪಹಾಸ್ಯ ಮಾಡುವರು. ಹೀಗೆ ಮೊಲಕ್ಕಿಂತಲೂ ನಿಕೃಷ್ಟವಾದುದು ನರನ ಬೆಲೆ. ಮಾನವ ಜನ್ಮಕ್ಕೆ ಬೆಲೆ ಬರಬೇಕೆಂದರೆ ಸೃಷ್ಟಿಕರ್ತನ ಆರಾಧನೆಯಿಂದ ಮಾತ್ರ!

163. ಜನನ -ಮರಣ ಗೆಲ್ಲುವಿಕೆ

ಉತ್ಪತ್ತಿಯಲ್ಲಿ ಶುಕ್ಲ ಶೋಣಿತದಿಂದಾದ ಲಜ್ಜೆ ಸಾಲದೆ?
ಮತ್ತೆ ದುರಿತಂಗಳ ಹೆರುವ ಹೇಗಶನವೇಕಯ್ಯಾ?
ಮೃತ್ಯುವಿನ ಬಾಯಿಗೆ ತುತ್ತಾಗಲೇಕಯ್ಯಾ?
ಒತ್ತೊತ್ತೆಯ ಜನನವ ಗೆಲುವಡೆ ಕರ್ತನ ಪೂಜಿಸು
ನಮ್ಮ ಲಿಂಗದೇವನ. ಬ.ವ.ದೀ.161

ಜೀವೋತ್ಪತ್ತಿಯಾಗಲು ತಂದೆ ತಾಯಿಯ ರೇತೋಬಿಂದುಗಳೇ ಕಾರಣ. ಮಗುವು ತಾಯಿಯ ರಕ್ತವನ್ನು ಹಂಚಿಕೊಂಡು ಹುಟ್ಟಿ ಬೆಳೆಯುತ್ತದೆ. ತಾಯಿಯ ಗರ್ಭದಲ್ಲಿ ಇದ್ದಾಗ ಮುದುಡಿ ಕುಳಿತ

ಯಾತನೆ ಎಷ್ಟು? ನಂತರ ನೋವಿನ ಪ್ರಸವ! ಇಷ್ಟಾದರೂ ಮಾನವ ಜನ್ಮದ ಬಗ್ಗೆ ತಿರಸ್ಕಾರ ಹುಟ್ಟದಲ್ಲ! ಮತ್ತೆ ಮತ್ತೆ ದುರಿತಂಗಳು ಅಂದರೆ ಪಾಪ ಕರ್ಮಗಳನ್ನು ಹೆರುವ -ಅಂದರೆ ಉತ್ಪತ್ತಿ ಮಾಡುವ ಮೂರ್ಖತನವೇಕೆ? ಇದರಿಂದಾಗಿ ಮೃತ್ಯುವಿನ ಬಾಯಿಗೆ ಬೇಗನೆ ತುತ್ತಾಗುವನು. ಮುಂದೆ ಹುಟ್ಟಬಾರದು ಎಂದಿದ್ದರೆ ಸೃಷ್ಟಿಕರ್ತನಾದ ಲಿಂಗದೇವನನ್ನು ಪೂಜಿಸಬೇಕು. ಕರ್ತನ ಪೂಜೆಯಿಂದ ಜನನ ಮರಣಗಳನ್ನು ಗೆಲ್ಲಲು ಸಾಧ್ಯ !

164. ಪೂಜೆಯು ಗಾರುಡ ವಿದ್ಯೆ

ಮನವೇ ಸರ್ಪ ತನುವೇ ಹೇಳಿಗೆ
ಹಾವಿನೊಡೆತನ ಹುದುವಾಳಿಗೆ!
ಇನ್ನಾವಾಗ ಕೊಂದಹುದೆಂದರಿಯೆ
ಇನ್ನಾವಾಗ ತಿಂದಹುದೆಂದರಿಯೆ!
ನಿಚ್ಚ ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ
ಅದೇ ಗಾರುಡ, ಲಿಂಗದೇವಾ ಬ.ವ.ದೀ.162

ಮನಸ್ಸು ಎನ್ನುವುದೇ ಸರ್ಪ, ಅದು ಅಡಗಿರುವ ಬುಟ್ಟಿ ಎಂದರೆ ಶರೀರ. ಇದರೊಡನೆ ಸರಸವಾಡುವುದು ಭಯಂಕರ. ಮಾನವನಿಗೆ ಹೊರಗಿನ ಶತ್ರುವಿಗಿಂತ ಒಳಗೇ ಬುಸುಗುಡುವ ಮನದ ಸರ್ಪದ ಕಾಟವೇ ತೀವ್ರ ಕಳವಳಕಾರಿ. ಹಾವನ್ನಾಡಿಸುವ ಹಾವಾಡಿಗನಂತೆ ವಿವೇಕ. ತಾನೇ ಸಾಕಿದ ಹಾವು ಯಾವಾಗ ಕಚ್ಚುತ್ತೋ, ಅದೇ ಹೆಬ್ಬಾವಾಗಿ ಯಾವಾಗ ನುಂಗುತ್ತೋ ಹೇಳಲಾಗುವುದಿಲ್ಲ. ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಮನಸ್ಸೆಂಬ ಸರ್ಪ ಅಂತರಂಗವನ್ನು ಕಲುಷಿತಗೊಳಿಸುತ್ತಿರುತ್ತದೆ. ಆದ್ದರಿಂದ ಇದರ ವಿಷವೇರಬಾರದು ಎಂದಿದ್ದರೆ ಪ್ರತಿ ದಿನವೂ ಸೃಷ್ಟಿಕರ್ತನ ಪೂಜೆ -ಧ್ಯಾನಗಳೆಂಬ ಗಾರುಡ ವಿದ್ಯೆಯನ್ನು ಪ್ರಯೋಗಿಸಬೇಕು.

ಹಾವು - ಮುಂಗುಸಿ ಕಾದಾಡುತ್ತವೆ. ಅಂತಿಮವಾಗಿ ಮುಂಗುಸಿಯೇ ಗೆಲ್ಲುವುದಾದರೂ ಹಾವು ಹೊಡೆದು, ಕಚ್ಚುವುದರಿಂದ ಮುಂಗುಸಿಗೆ ವಿಷವು ದೇಹವನ್ನು ಪ್ರವೇಶಿಸಿರುತ್ತದೆ. ಹಾವು ಸತ್ತ ನಂತರ ಮುಂಗುಸಿ ಹೋಗಿ ನಂಜಳಿಸುವ ಒಂದು ಬೇರನ್ನು ತಿನ್ನುವುದಂತೆ. ಅದೇ ರೀತಿ ಮಾನವನು ಸುಪ್ರಭಾತದಲ್ಲಿ ಒಮ್ಮೆ ಪೂಜೆ ಮಾಡಬೇಕು. ದಿನದ ವ್ಯವಹಾರ ಮುಗಿದ ಮೇಲೆ ರಾತ್ರಿ ಒಮ್ಮೆ ಪೂಜೆ ಮಾಡಿ ಪ್ರಸಾದ ಮಾಡಬೇಕು. ಇದರಿಂದ ಮಾನಸಿಕವಾಗಿ ಪುನಶ್ಚೇತನ ಹೊಂದುವನು. ಪೂಜೆ -ಧ್ಯಾನಗಳಿಂದ ಮನಸ್ಸು ಪ್ರಸನ್ನವಾಗುವುದು.

165. ಸ್ವಾವಲಂಬಿಯಾಗಿದ್ದಾಗಲೇ ಪರಮಾರ್ಥ

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲಮೇಲೆ ಕೈಯನೂರಿ ಕೋಲು ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ
ಪೂಜಿಸು ಲಿಂಗದೇವನ. - ಬ.ವ.ದೀ.162

ದಿನದಲ್ಲಿ ಸುಪ್ರಭಾತ, ಮಧ್ಯಾಹ್ನ, ಸಂಜೆ ಎಂಬ ತ್ರಿಕಾಲಗಳು ಇರುವಂತೆ ಜೀವನದಲ್ಲಿ ಬಾಲ್ಯ, ಯೌವ್ವನ, ಮುಪ್ಪು ಎಂಬವು ಇರುತ್ತವೆ. ಭಾರತೀಯರಲ್ಲಿ ಕೆಲವಾರು ತಪ್ಪು ಕಲ್ಪನೆಗಳಿವೆ. ಬಾಲ್ಯ, ಯೌವ್ವನದಲ್ಲಿ ಸುಖ ಪಡಬೇಕು. ಆಗೆಲ್ಲ ಭಕ್ತಿ -ಜ್ಞಾನ ಎಂದು ತಲೆ ಕೆಡಿಸಿಕೊಳ್ಳಬಾರದು. ಮುಪ್ಪು ಬಂದಾಗ ಮನಸ್ಸನ್ನು ಅಧ್ಯಾತ್ಮದ ಕಡೆಗೆ ತಿರುಗಿಸಬೇಕು. ಆಗ ಪುರಾಣ, ಕೀರ್ತನ ಎಂಬುವನ್ನು ಆಲಿಸಬೇಕು. ಇಂಥ ನಂಬಿಕೆ ಇರುವವರಿಗೆ ಧರ್ಮಪಿತ ಬಸವಣ್ಣನವರು ಈ ವಚನದಲ್ಲಿ ತಿಳಿ ಹೇಳುತ್ತಾರೆ.

ನರೆ ಕೆನ್ನೆಗೆ ಎಂದರೆ ಕೆನ್ನೆಯ ಮೇಲೆ ಗಡ್ಡದಲ್ಲಿ ಬಿಳಿಯ ಕೂದಲು ಕಾಣಿಸಿಕೊಳ್ಳುವುದು. ಇಲ್ಲಿಗೆ ಯೌವ್ವನ ಮುಗಿದು ವಾರ್ಧಿಕ್ಯ ಆರಂಭವಾಯಿತು ಎಂದರ್ಥ. ಗಲ್ಲದ ಮೇಲೆ ಗೆರೆಗಳು ಪ್ರಾರಂಭವಾಗುವ ಮುನ್ನ, ಶರೀರವು ತಾರುಣ್ಯದ ಕಸುವನ್ನು ಕಳೆದುಕೊಂಡು ಎಲುಬಿನ ಗೂಡು ಆಗುವ ಮೊದಲು, ಹಲ್ಲುಗಳು ಉದುರಿ, ಬೆನ್ನು ಬಾಗಿ ಕುರೂಪವು ಶರೀರದ ಮೇಲೆ ಸವಾರಿ ಮಾಡುವ ಮೊದಲು, ವೃದ್ಧಾಪ್ಯದ ನಿಶ್ಶಕ್ತಿಯಿಂದ ಅನ್ನರ ಆಸರೆಯಲ್ಲಿ ಹಂಗಿಗೆ ಒಳಗಾಗುವ ಮೊದಲು, ಕುಳಿತು, ಮೇಲೆ ಏಳುವಾಗ ಕಾಲಿನ

ಮೇಲೆ ಕೈಯನ್ನು ಊರಿ ಎದ್ದು ಕೋಲನ್ನು ಹಿಡಿಯುವಂತೆ ಆಗುವ ಮೊದಲು, ಮುಪ್ಪಿನ ದಾಳಿಯಿಂದ ಶರೀರವು ಅಂದಗೆಟ್ಟು ಕುರೂಪಗೊಳ್ಳುವ ಮೊದಲು, ಮೃತ್ಯು ಯಾವಾಗ ಬಂದು ಎರಗುವುದೋ ಬಲ್ಲವರಾರು? ಜೀವನ ಬಲು ನಶ್ವರ. ಅಂಥ ಮೃತ್ಯು ಮುಟ್ಟದ ಮುನ್ನ ಲಿಂಗದೇವನ ಪೂಜೆಯನ್ನು ಮಾಡಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು.

ಪ್ರಸ್ತುತ ವಚನದಲ್ಲಿ ಧರ್ಮಪಿತ ಬಸವಣ್ಣನವರು ಸವಿವರವಾಗಿ ಮುಪ್ಪಿನ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ನೀಡಿದ್ದಾರೆ.

166. ಬದುಕು ನೀರಿನ ಮೇಲಿನ ಗುಳ್ಳೆ

ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಕೊಟ್ಟು
ಸುರಕ್ಷಿತವ ಮಾಡುವ ಭರವ ನೋಡಾ!
ಮಹಾದಾನಿ ಲಿಂಗದೇವನ ಪೂಜಿಸಿ
ಬದುಕು ಓ ಕಾಯವ ನಿಶ್ಚೈಸದೆ - ಬ.ವ.ದೀ.164

ನೀರಿನ ಧಾರೆ ಬೀಳುವಾಗ, ಹರಿಯುವಾಗ ನೀರಿನ ಮೇಲೆ ಗುಳ್ಳೆಗಳು ಏಳುವುದುಂಟು. ಗೋಳಾಕಾರದಲ್ಲಿ ಎದ್ದು ನಂತರ ಫಟ್ ಅಂತ ಸಿಡಿಯುತ್ತವೆ. ಅಂಥ ನೀರ ಬೊಬ್ಬುಳಿಕೆಗೆ ಕಬ್ಬಿಣದ ಕಟ್ಟು ಹಾಕಿ ರಕ್ಷಿಸುತ್ತೇನೆ ಎನ್ನುವುದು ಹಾಸ್ಯಾಸ್ಪದವಲ್ಲವೆ? ಹಾಗೆಯೇ ಮನುಷ್ಯನ ಜೀವನವೂ ಅಷ್ಟೇ ಕ್ಷಣಿಕ. ಆದರೆ ಜನರು ನೀರ ಮೇಲಿನ ಗುಳ್ಳೆಯಂತಿರುವ ಶರೀರದ ಸಂರಕ್ಷಣೆಗಾಗಿ ಎಷ್ಟೆಲ್ಲ ಪ್ರಯತ್ನ ಮಾಡುತ್ತಾರೆ. ಬಗೆಬಗೆಯ ತಿನಿಸು, ವೈವಿಧ್ಯ ಮಯ ಬಟ್ಟೆ -ಆಭರಣಗಳು ಮುಂತಾದವುಗಳಿಂದ ಶರೀರವನ್ನು ಪೋಷಿಸುವರು ಮತ್ತು ಅಲಂಕರಿಸುವರು. ಆದ್ದರಿಂದ ಜೀವನವು ಅರ್ಥಪೂರ್ಣವಾಗ ಬೇಕಾದರೆ ಮಹಾದಾನಿಯಾದ ಲಿಂಗದೇವನನ್ನು ನಂಬಿ ಪೂಜಿಸಬೇಕು. ಕೇವಲ ಅಶಾಶ್ವತವಾದ ಶರೀರದ ಸುಖದ ಕಡೆಗೆ ಗಮನ ಕೊಡದೆ ಶಾಶ್ವತವಾದ ಆತ್ಮದ ಸುಖದ ಕಡೆಗೆ ಗಮನ ಕೊಡಬೇಕು.

167. ಮಾಯಾ ಮಂಜರದ ಲೀಲೆ

ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೆ
ಎಂದೆಂದೂ ಅಳಿಯೆನೆಂದು
ಗುಡಿಗಟ್ಟಿದೆಯಲ್ಲಾ ನಿನ್ನ ಮನದಲ್ಲಿ!
ಮಾಯಾಮಂಜರ ಕೊಲುವಡೆ ನಿನ್ನ ಹಂಜರ ಕಾವುದೆ
ಲಿಂಗದೇವನಲ್ಲದೆ ? - ಬ.ವ.ದೀ.165

ಪಂಜರದಲ್ಲಿ ಬಂಧಿತವಾಗಿರುವ ಗಿಳಿಗಳಲ್ಲಿ ಎರಡು ಪ್ರಕಾರದವು ಇರುತ್ತವೆ. ಪಂಜರದೊಳಗೇ ಹಣ್ಣು ತಿನ್ನಲು ಸಿಗುತ್ತಿದ್ದರೆ ಆನಂದವಾಗಿ ತಿನ್ನುತ್ತ, ಇದ್ದಲ್ಲೇ ಆಹಾರ ದೊರೆಯಿತು ಎಂದು ಸುಖಿಸುತ್ತ, ಕಬ್ಬಿಣದ ಪಂಜರವಾಗಿರುವುದರಿಂದ ಯಾವ ಬೆಕ್ಕೂ ದಾಳಿ ಮಾಡಿ, ಕೊಲ್ಲಲಾರದು ಎಂದು ಸಂತೋಷದಿಂದ ಹಾಡುತ್ತ ಇರುವ ಗಿಳಿ ಒಂದು ಬಗೆ. ಹಣ್ಣು ಇದ್ದಲ್ಲೇ ಒದಗಿದರೇನು, ಬದುಕಿನಲ್ಲಿ ಸ್ವಾತಂತ್ರ್ಯವಿಲ್ಲದಾಯಿತು! ಪಂಜರವು ಕಬ್ಬಿಣದ್ದಾದರೇನು ಬಂಗಾರದ್ದಾದರೇನು ಅದು ಬಂಧನವೇ ಸರಿ; ಇದರಿಂದ ಪಾರಾಗುವುದು ಹೇಗೆ ಎಂದು ಚಿಂತಿಸುವ ಗಿಳಿ ಇನ್ನೊಂದು ಬಗೆ. ಹಾಗೆಯೇ ಜೀವಾತ್ಮರುಗಳಲ್ಲಿ ಎರಡು ಬಗೆ. ಸುಖ ಭೋಗಗಳ ಪಂಜರದಲ್ಲಿ ಬಂಧಿತವಾಗಿ, ಬಿಡುಗಡೆಗೆ ಹಂಬಲಿಸುವ ಮುಮುಕ್ಷು, ಅವುಗಳಲ್ಲೇ ಸುಖಿಸುತ್ತ ಸಂತೋಷದಿಂದಿರುವ ಭವಾತ್ಮ. ಈ ಎರಡನೆ ಬಗೆಯ ವ್ಯಕ್ತಿಗಳಿಗೆ ಈ ವಚನದಲ್ಲಿ ಬೋಧೆ ಇದೆ.

"ಕಬ್ಬಿಣದ ಪಂಜರವು ಗಟ್ಟಿಯಾಗಿ ಇದೆ." ಎಂದು ಅಂಜದೆ ಆನಂದದಿಂದ ಹಣ್ಣು ತಿನ್ನುತ್ತ, ನಿಶ್ಚಿಂತವಾಗಿರುವ ಗಿಳಿಯಂತೆ ಇರುವ ಸುಖೀ ಮಾನವ, ಶರೀರ ರಕ್ಷಣೆಗೆ ನೀನು ಏನೆಲ್ಲ ಮಾಡಿಕೊಳ್ಳಬಹುದು. ಆದರೆ ಸಾವು ಎಂಬ ಮಾಯಾ ಮಂಜರವು ಅಂದರೆ ಬೆಕ್ಕು ಸದ್ದಿಲ್ಲದೆ ನುಸುಳಿ ಬಲಿ ತೆಗೆದುಕೊಳ್ಳಬಲ್ಲದು. ಆದ್ದರಿಂದ ಹೊರಗಡೆಯಿಂದ ನೀನು ಮಾಡಿಕೊಳ್ಳುವ ರಕ್ಷಣಾ ವ್ಯವಸ್ಥೆ ನಿನ್ನನ್ನು ಕಾಯಲಾರದು; ಕಾಯ ಬಹುದಾದರೆ ಸೃಷ್ಟಿಕರ್ತ ಲಿಂಗದೇವ ಮಾತ್ರ ಸಂರಕ್ಷಿಸಬಲ್ಲ!

168. ಸಂಸಾರ ಗಾಳಿಯ ಸೊಡರು

ಸಂಸಾರವೆಂಬುದೊಂದು ಗಾಳಿಯ ಸೊಡರು
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ!
ಇದ ನಚ್ಚಿ ಕೆಡಬೇಡ - ಸಿರಿಯೆಂಬುದ !
ಮರೆಯದೆ ಪೂಜಿಸು ನಮ್ಮ ಲಿಂಗದೇವನ. - ಬ.ವ.ದೀ.166

"ಸಂಸಾರ" ಎಂಬ ಪದ ಬಲು ವಿಶಾಲ ವ್ಯಾಪ್ತಿಯುಳ್ಳದ್ದು. ಹಿಂದಿಯಲ್ಲಿ "ಸಂಸಾರ್" ಎಂದರೆ ಜಗತ್ತು. ಸಂಸಾರ ಎಂದರೆ ಪರಿವಾರವೂ ಅಹುದು. ಹೆಂಡತಿ (ಗಂಡ)-ಮಕ್ಕಳು, ಬಂಧು ಬಳಗದಿಂದ ಕೂಡಿದುದು. ಸಂಸಾರ ಎಂದರೆ ಜೀವನವೂ ಅಹುದು. ಇದು ಗಾಳಿಯಲ್ಲಿಟ್ಟ ದೀಪದಂತೆ, ಯಾವುದೇ ಕ್ಷಣದಲ್ಲಿ ನಾಶವಾಗಬಹುದು. ಶ್ರೀಮಂತಿಕೆ ಎನ್ನುವುದು ಸಂತೆಯ ಮಂದಿಯಂತೆ. ಬೆಳಿಗ್ಗೆ ಸಂತೆ ಮೈದಾನದಲ್ಲಿ ಏನೂ ಇರದು, ಬಟಾ ಬಯಲಾಗಿರುವುದು. ನಂತರ ಜನರು ಬರುವರು, ಸಾಮಾನುಗಳು ಬಂದು ಬೀಳುವವು. ಮಾರುವವರು ಕೊಳ್ಳುವವರು ಗಜಿಬಿಜಿಯಿಂದ ಸಂತೆಯು ಸಾಗುವುದು. ಸಂಜೆಯಾಗುತ್ತ ಹೋದಂತೆ ಮತ್ತೆ ಜನರು ಕರಗುವರು, ಉಳಿಯುವುದು ಬಟಾ ಬಯಲು. ಸಿರಿಯೂ ಹಾಗೆಯೇ ಏನೂ ಇಲ್ಲದವನು ಸಾಕಷ್ಟು ಶ್ರೀಮಂತನಾಗಬಹುದು ಅವನ ಮಕ್ಕಳು ಬೆಳೆಸಬಹುದು. ಇಲ್ಲವೇ ಹಾಳು ಮಾಡಿ ಪೂರ್ವದ ಸ್ಥಿತಿಗೇ ಬರಬಹುದು. ಆದ್ದರಿಂದ ಹೆಂಡತಿ -ಮಕ್ಕಳು, ಬಂಧು - ಬಳಗ ಪರಿವಾರವನ್ನು ನಂಬಿ ಲಿಂಗದೇವನನ್ನು ಮರೆಯಬಾರದು. ಒದಗಿದ ಸಂಪತ್ತನ್ನು ಕಂಡು ಸಂಭ್ರಮಿಸುತ್ತ ದೇವನನ್ನು, ಜಂಗಮವನ್ನು ಅರ್ಥಾತ್ ಸಮಾಜವನ್ನು ಮರೆಯಬಾರದು. ಸಂಸಾರದ ಮಧ್ಯದಲ್ಲಿ ಇದ್ದುಕೊಂಡೂ, ಸಂಪತ್ತನ್ನು ಹೊಂದಿದ್ದೂ ಸಹ ಲಿಂಗದೇವನನ್ನು ಮರೆಯದೆ ಪೂಜಿಸಬೇಕು.

169. ಅಳಿಯಾಸೆ ಬೇಡ.

ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ,
ಕಾಡ ಬೆಳುದಿಂಗಳು ಸಿರಿ ಸ್ಥಿರವಲ್ಲ!
ಕೇಡಿಲ್ಲದ ಪದವಿಯನೀವ
ಲಿಂಗದೇವನ ಮರೆಯದೆ ಪೂಜಿಸೋ. - ಬ.ವ.ದೀ.167

ಎಲೆ ಮನುಷ್ಯ, ಕ್ಷುಲ್ಲಕ ಆಸೆಗಳು ಬೇಡ. ಸ್ವಲ್ಪ ಸಂಪತ್ತು ಲಭ್ಯವಾಗುತ್ತಿದ್ದಂತೆಯೇ ತಲೆ ನಿಲ್ಲದಂತೆ ಸಂಭ್ರಮಿಸುತ್ತೀಯೆ. ಕಾಡಿನ ಬೆಳದಿಂಗಳಂತೆ ಸಿರಿಯು ನಿಷ್ಪ್ರಯೋಜಕ. ದಟ್ಟವಾದ ಕಾಡಿನಲ್ಲಿ ಬೆಳದಿಂಗಳು ನಿಷ್ಪ್ರಯೋಜಕ. ಏಕೆಂದರೆ ಎಲೆಗಳು ಜರಡಿಯಂತೆ ಆಡಿ ಬೆಳದಿಂಗಳು ಅಖಂಡವಾಗಿ ಬೀಳದಂತೆ ಮಾಡುತ್ತವೆ. ಹೀಗಾಗಿ ಬಯಲಿನಲ್ಲಿ ಬೆಳದಿಂಗಳ ಬೆಳಕಿನಲ್ಲಿ ನಡೆಯಬಹುದಾದಂತೆ ಕಾಡಿನಲ್ಲಿ ನಡೆಯಲು ಬೆಳದಿಂಗಳು ಉಪಯೋಗವಾಗದು. ಅದೇ ರೀತಿ ಸಿರಿಯೂ ಸ್ಥಿರವಲ್ಲ, ಕೇಡಿಲ್ಲದ ಮುಕ್ತಿ ಪದವಿಯನ್ನು ನೀಡಬಲ್ಲ ಲಿಂಗದೇವನನ್ನು ಮರೆಯದೆ ನಿತ್ಯವೂ ಪೂಜಿಸು.

170. ಲಿಂಗದೇವಂಗೆ ಶರಣೆನ್ನು

ಎಂತಕ್ಕೆ ಎಂತಕ್ಕೆ -
ಹಡೆದ ಕಾಯ ಬೀಯುವಾಗದ ಮುನ್ನ ಅಟ್ಟುಣ್ಣು ಓ!
ಬೆರಣೆಯುಳ್ಳಲ್ಲಿ, ಹೊತ್ತು ಹೋಗದ ಮುನ್ನ ಅಟ್ಟುಣ್ಣು ಓ!
ಮರಳಿ ಭವಕ್ಕೆ ಬಹ -ಬಾರದಿಹ:
ಕರ್ತೃ ಲಿಂಗದೇವಂಗೆ ಶರಣೆನ್ನು ಓ! - ಬ.ವ.ದೀ.168

"ಅಯ್ಯಾ, ಮಾನವ. ಏನಿದು? ನೀನು ಮಾಡುತ್ತಿರುವುದೇನು? ಸ್ವಲ್ಪ ಆತ್ಮಾವಲೋಕನ ಮಾಡಿಕೊ. ಒಬ್ಬ ವ್ಯಕ್ತಿಯಲ್ಲಿ ಅಡಿಗೆ ಮಾಡಲು ಬೇಕಾದ ಬೆರಣಿ ಇದೆ. ಅಡಿಗೆ ಮಾಡಿಕೊಂಡು ಉಂಡು ಹಸಿವು ನೀಗಿಸಿಕೊಳ್ಳಬೇಕು. ಇಲ್ಲದಿದ್ದರೆ ಹೊತ್ತು ಹೋಗಿ ಬಿಡುತ್ತದೆ. ಅದೇ ರೀತಿ ದೇವನನ್ನು ಒಲಿಸಲು ಅಮೂಲ್ಯ ಸಾಧನವಾಗುವ ಶರೀರದ ಶಕ್ತಿ ಕಳೆದುಹೋಗುವ ಮುನ್ನ ಶರೀರವೆಂಬ ಪಾತ್ರೆಯಲ್ಲಿಯೇ ದಿವ್ಯಾನುಭವದ ಅಡಿಗೆಯನ್ನು ಮಾಡಿಕೊಂಡು ಉಣ್ಣಬೇಕು.

ಮುಂದಿನ ಜನ್ಮಕ್ಕೆ ಬರುವುದು, ಬಾರದೆ ಇರುವುದು ನಿನ್ನ ಕೈಲೇ ಇದೆ. ಸೃಷ್ಟಿಕರ್ತನಾದ ಲಿಂಗದೇವರಿಗೆ ಶರಣೆಂದು ಭವವನ್ನು ತಪ್ಪಿಸಿಕೊ.

171. ಶಕುನ ಅಪಶಕುನದ ಭ್ರಾಂತಿ

ಶಕುನವೆಂದೆಂಬೆ, ಅಪಶಕುನವೆಂದೆಂಬೆ -
ನಿಮ್ಮವರು ಅಳಲಿಕೆ ಅಂದೇಕೆ ಬಂದೆ?
ನಿಮ್ಮವರು ಅಳಲಿಕೆ ಇಂದೇಕೆ ಹೋದೆ?
ನೀ ಹೋಹಾಗಳಕ್ಕೆ! ನೀ ಬಾಹಾಗಳಕ್ಕೆ
ಅಕ್ಕೆ ಬಾರದ ಮುನ್ನ ಪೂಜಿಸು ಲಿಂಗದೇವನ. - ಬ.ವ.ದೀ.169

"ಎಲೈ ಮೂಢ ಮಾನವಾ, ಎಲ್ಲದಕ್ಕೂ ಶಕುನವನ್ನು ನೋಡುತ್ತೀಯೆ ! ಕೆಲವೊಂದು ಘಟನೆಗಳನ್ನು ಅಪಶಕುನ ಎಂದು ಭಾವಿಸಿ, ಕೈಗೊಂಡ ಕೆಲಸವನ್ನು ಬಿಡುತ್ತೀಯೆ. ಏನಾದರೂ ಕಾರ್ಯಕ್ಕೆ ಹೊರಟಾಗ ಯಾರಾದರೂ ಅತ್ತರೆ ಅಪಶಕುನವಾಯಿತು ಎಂದು ಹೋಗುವುದನ್ನು ನಿಲ್ಲಿಸಿ, ಕುಳಿತು ಬಿಡುವೆ. ನೀನು ಜನಿಸುವಾಗ ನಿನಗೆ ಜನ್ಮವಿತ್ತ ತಾಯಿ ಹೆರಿಗೆ ಬೇನೆ ತಡೆಯಲಾರದೆ ಅಳುತ್ತಿದ್ದಳು. ಆಗ ಅಪಶಕುನವಾಯಿತೆಂದು ನೀನೇಕೆ ಗರ್ಭದಲ್ಲೇ ಉಳಿಯದೆ, ಹೊರಗೆ ಬಂದೆ?! ನೀನು ಸಾಯುವಾಗ ಸತಿಸುತರು ಬಂಧು ಬಳಗ ಕಣ್ಣೀರು ಸುರಿಸುವರು. ಆಗೇಕೆ ಪ್ರಾಣವನ್ನು ತಡೆಹಿಡಿಯುವುದಿಲ್ಲ. ನೀನು ಹೋಗುವಾಗಲೂ ದುಃಖ, ಬರುವಾಗಲೂ ದುಃಖ. ಆದ್ದರಿಂದ ಜೀವನದಲ್ಲಿ ದುಃಖವೆರಗುವ ಮೊದಲೇ ಲಿಂಗದೇವನನ್ನು ಪೂಜಿಸು.

172. ಜೀವನ - ಮೋಡದ ನೆರಳು

ನಿಮಿಷದ ನಿಮಿಷಂ ಬೋ ಕ್ಷಣದೊಳಗರ್ಧಂ ಬೋ
ಕಣ್ಣ ಮುಚ್ಚಿ ಬಿಚ್ಚುವೈಸು ಬೇಗಂ ಬೋ:
ಸಂಸಾರದಾಗುಂ ಬೋ! ಸಂಸಾರದ ಹೋಗುಂ ಬೋ!
ಸಂಸಾರದೊಪ್ಪಂ ಬೋ! ಲಿಂಗದೇವಾ,
ನೀ ಮಾಡಿದ ಮಾಯಂ ಬೋ ಅಭ್ರಚ್ಛಾಯಂ ಬೋ! - ಬ.ವ.ದೀ.170

ಜೀವನ ಬಲು ಕ್ಷಣಿಕ, ನಾಳೆ ಏನು ಎಂಬುದು ಗೊತ್ತಿಲ್ಲ. ಮುಂದಿನ ನಿಮಿಷದಲ್ಲಿ ಏನಾಗುತ್ತದೆ ತಿಳಿಯದು. ಅಷ್ಟೇಕೆ ಮುಂದಿನ ಕ್ಷಣದಲ್ಲಿ ಏನಾಗುತ್ತದೆ ತಿಳಿಯದು; ಅಷ್ಟೇಕೆ ಕಣ್ಣಿನ ರೆಪ್ಪೆ ಮುಚ್ಚಿ ತೆರೆಯುವಲ್ಲಿ ಏನಾಗುತ್ತದೆ ತಿಳಿಯದು. ಸಂಸಾರದ ಆಗು, ಹೋಗು, ಅದರ ಒಪ್ಪು ಎಲ್ಲವೂ ದೇವನು ಮಾಡಿರುವ ಮಾಯೆ! ಆಕಾಶದಲ್ಲಿ ತೇಲುವ (ಅಭ್ರಚ್ಛಾಯೆ) ಮೋಡದ ನೆರಳಿನಷ್ಟೆ ಕ್ಷಣಿಕ!

ನನಗೊಬ್ಬರೆ ಮಾತಾಜಿ

ಓ ಗುರು ಮಾತೆ ನಿಮಗೆ ಸಾವಿರಾರು ಸಾಧಕರು
ಓ ಗುರು ಮಾತೆ ನಿಮಗೆ ಲಕ್ಷಾಂತರ ಭಕ್ತರು
ಓ ಗುರು ಮಾತೆ ನಿಮಗೆ ಲಕ್ಷಾಂತರ ಶಿಷ್ಯರು
ಓ ಗುರು ಮಾತೆ ನಿಮಗೆ ಲಕ್ಷಾಂತರ ಪುತ್ರರು
ಓ ಗುರು ಮಾತೆ ನಿಮಗೆ ಲಕ್ಷಾಂತರ ಪುತ್ರಿಯರು
ಓ ಗುರು ಮಾತೆ ನನಗೆ ನೀವೊಬ್ಬರೆ ಗುರುಮಾತೆ
ಓ ಗುರು ಮಾತೆ ನನಗೆ ನೀವೊಬ್ಬರೆ ದೀಕ್ಷಾಗುರು
ಓ ಗುರು ಮಾತೆ ನನಗೆ ನೀವೊಬ್ಬರೆ ಪೂಜ್ಯ ಮಾತಾಜಿ !

ವಂದಿಸಬೇಕು

ಬಸವ ಮಾರ್ಗದಿ ಲಿಂಗದೇವನ ಸೇರಬೇಕೆಂದು
ಲಿಂಗದೀಕ್ಷೆಯ ಪಡೆದು ದೀಕ್ಷಾಗುರುವನು
ವಂದಿಸಬೇಕಲ್ಲದೆ ನಿಂದಿಸಿದರೆ
ಬಸವ ಮಾರ್ಗ ದೂರ, ಲಿಂಗದೇವದೂರ ನೋಡಾ
ಗುರು ಬಸವಲಿಂಗಾ ॥

(-ಮಂಜುನಾಥ ಜಿ.ಅಂಗಡಿ ಧಾರವಾಡ)

ಪರಿಪೂರ್ಣ ಚೇತನ ಗುರು ಬಸವಣ್ಣನವರು

(876ನೆಯ ಬಸವ ಜಯಂತಿ ನಿಮಿತ್ತ ಲೇಖನ)

ಮರ್ತ್ಯ ಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶರಣನ.
ಆ ಶರಣ ಬಂದು ಕಲ್ಯಾಣವೆಂಬ ಶಿವಪುರನ ಕೈಲಾಸವ ಮಾಡಿ
ರುದ್ರಗಣ ಪ್ರಮಥ ಗಣಂಗಳೆಲ್ಲರರೆಲ್ಲರ ಹಿಡಿತಂದು,
ಅಸಂಖ್ಯಾತರೆಂಬ ಹೆಸರಿಟ್ಟು ಕರೆದು,
ಭಕ್ತಿಯ ಕುಳಸ್ಥಳವ ಶ್ರುತದೃಷ್ಟ ಪವಾಡದಿಂದ ಮೆರೆದು ತೋರಿ,
ಜಗವರಿಯಲು ಶಿವಚಾರದ ಧ್ವಜವನೆತ್ತಿಸಿ
ಮರ್ತ್ಯಲೋಕ ಶಿವಲೋಕವೆರಡಕ್ಕೂ ನಿಚ್ಚಣಿಕೆಯಾದನು.
ಆ ಶಿವಶರಣನ ಮನೆಯೊಳಗಿಪ್ಪ ಶಿವಗಣಂಗಳ ತಿಂಥಿಣಿಯ ಕಂಡು
ಎನ್ನ ಮನ ಉಬ್ಬಿ, ಕೊಬ್ಬಿ, ಹರುಷದಲೋಲಾಡುತ್ತಿದ್ದೇನಯ್ಯ
ನಮ್ಮ ಗುಹೇಶ್ವರನ ಶರಣ ಸಂಗನ ಬಸವಣ್ಣನ ದಾಸೋಹದ
ಘನವನೇನೆಂದೆನಬಹುದು ನೋಡಾ ಸಿದ್ಧರಾಮಯ್ಯ. (ಅ.ವ.ಸಂ.-760)

ತಾನೆ ಸೃಷ್ಟಿಸಿದ ಸುಂದರವಾದ ಮರ್ತ್ಯಲೋಕವನ್ನು ಸ್ವಾರ್ಥಿಯಾದ ಮಾನವನು ಅಂದಗೆಡಿಸಿದ್ದನ್ನು ಕಂಡು ಮನನೊಂದ ಸೃಷ್ಟಿಕರ್ತ ಲಿಂಗದೇವನು ಈ ಮರ್ತ್ಯಲೋಕದ ಉದ್ಧಾರಕ್ಕಾಗಿ ತನ್ನ ಅನುಗ್ರಹವನ್ನು ತುಂಬಿ ಗುರುಬಸವಣ್ಣನವರನ್ನು ಕಳಿಸಿದ.

ಗುರುಬಸವಣ್ಣನವರು ಮರ್ತ್ಯಲೋಕದಲ್ಲಿ ಬಂದು ನಿಂದ ಜಾಗವೇ ನಿಜ ನಿವಾಸವಾಯಿತು. ಅವರು ಮೆಟ್ಟಿದ ಧರೆ ಪಾವನವಾಯಿತು, ಅವರು ಇದ್ದ ಪುರವೇ ಕೈಲಾಸ ಪುರವಾಯಿತು. ಶಿವಪುರವಾಗಿದ್ದ ಕಲ್ಯಾಣವನ್ನು ಕೈಲಾಸ ಪುರವನ್ನಾಗಿ ಮಾಡಿದವರು ಗುರುಬಸವಣ್ಣನವರು ಎಂದು ಅಲ್ಲಮ ಪ್ರಭುದೇವರು ಹೇಳುತ್ತಾರೆ. ಗುರುಬಸವಣ್ಣನವರು ಮರ್ತ್ಯಲೋಕಕ್ಕೆ ಬಂದು ಇಲ್ಲಿ ಶಿವಚಾರ (ಸಮಾನತೆಯ) ಧ್ವಜವನೆತ್ತಿದರು. ಇಲ್ಲಿ ಗುರುಬಸವಣ್ಣನವರು ಬರುವುದಕ್ಕಿಂತ ಮುಂಚೆಯ ಸಾಮಾಜಿಕ ಸ್ಥಿತಿ ತುಂಬಾ ಕರುಣಾಜನಕವಾಗಿತ್ತು. ನೆಲ-ನೆಲದಲ್ಲಿ ಭೇದ, ಜಲ-ಜಲದಲ್ಲಿ ಭೇದ, ಮಾನವ-ಮಾನವರಲ್ಲಿ ಬೇಧಗಳನ್ನು ಮಾಡಿ ಬಡವರನ್ನು, ದೀನರನ್ನು ಶೋಷಿಸುತ್ತಿದ್ದರು. ಶಿವಾಚಾರ ಎಂದರೆ ಸಮಾನತೆ. ಇಂಥ ಸಮಾನತೆಯ ಧ್ವಜವನ್ನು ಎತ್ತಿದರು. ಈ ಎಲ್ಲಾ ಭೇದಗಳನ್ನು ಅಳಿಸಿಹಾಕಿದರು.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ.
ಜಲವೊಂದೆ ಶೌಚಾಚಮನಕ್ಕೆ.
ಕುಲವೊಂದೆ ತನ್ನ ತಾನರಿದವಂಗೆ.
ಫಲವೊಂದೆ ಷಡುದರುಶನ ಮುಕ್ತಿಗೆ.
ನಿಲವೊಂದೆ, ಲಿಂಗದೇವಾ ನಿಮ್ಮನರಿದವಂಗೆ.

ಶಿವಾಲಯ ಕಟ್ಟುವ ನೆಲ ಬೇರೆಯಲ್ಲ, ಶೋಷಣೆಗೊಳಗಾದ ಜನರು ವಾಸಿಸುವ ಹೊಲಗೇರಿ ಎಂದು ಕರೆಯಲ್ಪಡುವ ನೆಲ ಬೇರೆಯಲ್ಲ, ಎರಡೂ ಒಂದೆ. ಸ್ನಾನಕ್ಕೆ, ಬಟ್ಟೆ ಒಗೆಯಲಿಕ್ಕೆ ಬಳಸುವ

ನೀರು, ಪೂಜೆಗೆ (ಆಚಮನ) ಬಳಸುವ ನೀರು ಒಂದೇ. ಅದೇ ರೀತಿ ಮರ್ತ್ಯಲೋಕದಲ್ಲಿ ಹುಟ್ಟಿದ ಮಾನವರೆಲ್ಲರೂ ಒಂದೇ. "ದೇವನೊಬ್ಬನೆ ತಂದೆ ಮನುಜರೆಲ್ಲರೂ ಒಂದೇ" ಎಂದು ಸಾರಿ ಜಗತ್ತು ಹಿಂದೆಂದೂ ಕಂಡರಿಯದ ದೈವೀರಾಜವನ್ನು, ಕಲ್ಯಾಣರಾಜ್ಯವನ್ನು (ಖಟಜ್ಜಜಕ್ಷಿಜ್ಞ ಖಠಚಠಿಭಿ, ಗಳ್ಛಿಜ್ಞಭಿ ಖಠಚಠಿಭಿ) ಗುರುಬಸವಣ್ಣನವರು ಕಟ್ಟಿದರು.

ಎಲ್ಲಾ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯ!
ಚೆಲ್ಲಿದನು ತಂದು ಶಿವ ಬೆಳಕ ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು.

ಪರಮಾತ್ಮನ ಕರುಣೆಯನ್ನು ಪಡೆಯಲಿಕ್ಕೆ ಯಾವುದೇ ನಿರ್ಬಂಧಗಳಿರಬಾರದು, ಅವರವರ ಸಾಧನೆಗೆ ತಕ್ಕಂತೆ ಪಡೆದುಕೊಳ್ಳುವಂತಾಗಬೇಕು. ಅದಕ್ಕಾಗಿ ಗುರು ಬಸವಣ್ಣನವರು, ಶಿವ ಬೆಳಕನ್ನು ಕೊಡಲಿಲ್ಲ, ತಂದು ಚೆಲ್ಲಿದರು.

"ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದೊಡೆ ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ" ಎಂದು ಅಕ್ಕನಾಗಮ್ಮ ತಾಯಿಯವರು ಹೇಳಿದರೆ, "ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದಡೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು" ಎಂದು ಸಿದ್ಧರಾಮೇಶ್ವರರು ಹೇಳುತ್ತಾರೆ. "ಮಹಾ ಮಹಿಮ ಸಂಗನ ಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೂ ಗುರು ಕಾಣಾ" ಎಂದು ಅಲ್ಲಮ ಪ್ರಭುದೇವರು ಗುರು ಬಸವಣ್ಣನವರ ಮಹಿಮೆಯನ್ನು ಕೊಂಡಾಡುತ್ತಾರೆ.

12ನೇ ಶತಮಾನದ ಶರಣ ತಾರಮಂಡಲದ ಭಾಸ್ಕರ ಗುರು ಬಸವಣ್ಣನವರು. ದೇಶದ ಮೂಲೆ ಮೂಲೆಯಿಂದ, ಕಲ್ಯಾಣಕ್ಕೆ ಹರಿದು ಬಂದ ಜನ ಅವರು ಕೊಟ್ಟಿರುವ ಇಷ್ಟಲಿಂಗಕ್ಕೆ ಆಕರ್ಷಣೆಗೊಂಡು ಬರಲಿಲ್ಲ, ಅವರ ಘನ ವ್ಯಕ್ತಿತ್ವಕ್ಕೆ ಮಾರುಹೋಗಿ ಬಂದರು.

ಅನುಭಾವ ಮಂಟಪಕ್ಕೆ ಬರುವುದಕ್ಕಿಂತ ಮುಂಚೆ ಅಲ್ಲಮ ಪ್ರಭುದೇವರು ಅನೇಕ ಜನ ಸಾಧಕರನ್ನು ಸಂದರ್ಶಿಸುತ್ತಾ ಬಂದರು. ಸಿದ್ಧರಾಮ ಶಿವಯೋಗಿಯವರಿಗೆ ಭೇಟಿಯಾಗಿ ಸಿದ್ಧರಾಮೇಶ್ವರರಲ್ಲಿರುವ ಅನೇಕ ತಪ್ಪು ಕಲ್ಪನೆ ಮತ್ತು ಭ್ರಮೆಗಳನ್ನು ಹೊಡೆದೋಡಿಸುತ್ತಾರೆ. ಆಗ ಸಿದ್ಧರಾಮೇಶ್ವರರ ಮನಸ್ಸು ತಿಳಿಯಾಗುತ್ತದೆ. ಇಷ್ಟಲಿಂಗದ ಬಗ್ಗೆ ಅಲ್ಲಮ ಪ್ರಭುಗಳು ಸಿದ್ಧರಾಮೇಶ್ವರರಿಗೆ ಹೇಳಿದಾಗ "ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಸಿದ್ಧರಾಮೇಶ್ವರರು, ಇಷ್ಟಲಿಂಗವೆಂದರೇನು? ಅದನ್ನು ಏಕೆ ಧರಿಸಬೇಕು? ಇದು ನಿಮ್ಮ ಕರಸ್ಥಲಕ್ಕೆ ಹೇಗೆ ಬಂದಿತು? ಇದರ ಜನಕರು ಯಾರು? ಎಂದೆಲ್ಲ ಅನೇಕ ಪ್ರಶ್ನೆಗಳನ್ನು ಕೇಳಿದಾಗ ಅಲ್ಲಮ ಪ್ರಭುದೇವರು ಈ ರೀತಿ ಹೇಳುತ್ತಾರೆ.

ಆಯತಲಿಂಗವಿಡಿದು ಸ್ವಾಯತ ಲಿಂಗವ ಕಾಣಬೇಕು ಸಿದ್ಧರಾಮಯ್ಯ
ಸ್ವಾಯತಲಿಂಗವಿಡಿದು ಜಂಗಮ ಲಿಂಗವ ಕಾಣಬೇಕು ಸಿದ್ಧರಾಮಯ್ಯ
ಜಂಗಮಲಿಂಗವಿಡಿದು ಗುರು ಲಿಂಗವ ಕಾಣಬೇಕು ಸಿದ್ಧರಾಮಯ್ಯ
ಗುರುಲಿಂಗವಿಡಿದು ಶಿವಲಿಂಗವ ಕಾಣಬೇಕು ಸಿದ್ಧರಾಮಯ್ಯ
ಶಿವಲಿಂಗವಿಡಿದು ಪ್ರಸಾದ ಲಿಂಗವ ಕಾಣಬೇಕು ಸಿದ್ಧರಾಮಯ್ಯ
ಇಂತು ಷಡಸ್ಥಲದಂತುವ ಸಂಧಿಸಿ ಒಂದು ಮಾಡಿಕೊಂಡಿಪ್ಪ ಕರಸ್ಥಲದನುವನು
ಗುಹೇಶ್ವರನ ಶರಣ ಸಂಗನ ಬಸವಣ್ಣ ಬಲ್ಲ;
ಬೆಸಗೊಂಬ ಬಾರಾ ಸಿದ್ಧರಾಮಯ್ಯ.

''ಇಷ್ಟಲಿಂಗವನ್ನು ಕಂಡು ಹಿಡಿದು, ಅದನ್ನು ಸಮಾನತೆಯ ಚಿಹ್ನೆಯನ್ನಾಗಿ ಮಾಡಿ, ನಿರಾಕಾರನಾದ ದೇವನನ್ನು ಅರಿಯುವ ಸಾಧನವನ್ನಾಗಿ ಮಾಡಿ, ಕಲ್ಯಾಣದಲ್ಲಿ ದಿನ ನಿತ್ಯವೂ ದಾಸೋಹ ಮಾಡುತ್ತ, ಪರಮಾನಂದದಲ್ಲಿ ಗುರುಬಸವಣ್ಣನವರಿದ್ದಾರೆ. ಅವರು ಕಾಯಕ ದಾಸೋಹ ತತ್ವದ ಮೂಲಕ ಅದ್ಭುತ ಕ್ರಾಂತಿಯನ್ನು ಸಮಾಜದಲ್ಲಿ ಮಾಡುತ್ತಿದ್ದಾರೆ, ಅವರಲ್ಲಿಗೆ ಹೋಗಿ ಇಷ್ಟಲಿಂಗದ ಮಹಿಮೆಯನ್ನು ಅರಿಯೋಣ ಬಾ ಸಿದ್ಧರಾಮಯ್ಯ'' ಎಂದು ಅಲ್ಲಮ ಪ್ರಭುದೇವರು ಸಿದ್ಧರಾಮೇಶ್ವರರನ್ನು ಕರೆದರು. ಆಗ, ಗುರುಬಸವಣ್ಣನವರ ವ್ಯಕ್ತಿತ್ವದ ಬಗ್ಗೆ ಕೇಳಿದ ಸಿದ್ಧರಾಮೇಶ್ವರರಿಗೆ ಇಷ್ಟಲಿಂಗದ ಬಗ್ಗೆ ಕುತೂಹಲ ಹೋಯಿತು. ಗುರುಬಸವಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋದರು. ಆಗ ಅವರು ಹೇಳುವ ವಚನ ಅಚ್ಚರಿ ಮೂಡಿಸುತ್ತದೆ.

ಅಯ್ಯಾ ನಿಮ್ಮ ಕರಸ್ಥಲದ ಘನ ನಿಮ್ಮಲ್ಲೇ ಇರಲಿ.
ಅಯ್ಯಾ ನಿಮ್ಮ ಪರಸ್ಥಲದ ಘನ ನಿಮ್ಮಲ್ಲೇ ಇರಲಿ.
ಕರಸ್ಥಲವನ್ನೊಲ್ಲೆ ಪರಸ್ಥಲವನ್ನೊಲ್ಲೆ; ಆವುದನು ಒಲ್ಲೆ ನೋಡಯ್ಯಾ.
ಕಪಿಲಸಿದ್ಧ ಮಲ್ಲಿನಾಥಯ್ಯ,
ನೀ ಒಲಿದು ಸಂಗನ ಬಸವಣ್ಣನ ಶ್ರೀಪಾದವ ತೋರಿಹೆನೆಂಬ
ಮಾತಿಂಗೆ ಮಾರುವೋದೆನು.
ಇನ್ನು ತೋರಿ ಎನ್ನನುಳುಹಿಕೊಳ್ಳಾ ಎನ್ನ ದೇವರ ದೇವಾ.

ನನಗೆ ಕರಸ್ಥಲವೂ ಬೇಡ ಪರಸ್ಥಲವೂ ಬೇಡ ಸಂಗನ ಬಸವಣ್ಣನವರು ಬೇಕು. ಬೇಗ ಅವರಲ್ಲಿಗೆ ಕರೆದುಕೊಂಡು ಹೋಗಿ ಎಂದು ಅಲ್ಲಮ ಪ್ರಭುದೇವರಿಗೆ ಅಂಗಲಾಚುತ್ತಾರೆ. ಗುರು ಬಸವಣ್ಣನವರನ್ನು ಕಂಡಾಗ ಸಿದ್ಧರಾಮೇಶ್ವರರ ಹರ್ಷ ಹೇಳ ತೀರದು. ''ಪಾವನನಾದೆನು ಬಸವಣ್ಣಾ, ನಿಮ್ಮ ಪಾವನ ಮೂರ್ತಿಯ ಕಂಡು, ಪರತತ್ವವನ್ನೈದಿದೆ ಬಸವಣ್ಣ ನಿಮ್ಮ ಪರುಷಪಾದವ ಕಂಡು,ಪದ ನಾಲ್ಕು ಮೀರಿದೆ ಬಸವಣ್ಣ ನಿಮ್ಮ ಪರಮ ಸೀಮೆಯ ಕಂಡು, ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿದೆ ಬಸವಣ್ಣಾ ಬಸವಣ್ಣಾ ನೀನು ಗುರುವಾದೆಯಾಗಿ''; **''ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ ಬಸವಣ್ಣ, ಲಿಂಗವಾಗಿ ಬಂದೆನ್ನ ಮನದ ಮೈಲಿಗೆಯ ತೊಳೆದಿರಿ ಬಸವಣ್ಣ, ಜಂಗಮವಾಗಿ ಬಂದೆನ್ನ ಪ್ರಪಂಚುಕತನವ ಬಿಡಿಸಿ ಪರಮ ಸೀಮೆಯ ತೋರಿದಿರಿ ಬಸವಣ್ಣ''**ಎಂದು ಗುರು ಬಸವಣ್ಣನವರ ದಿವ್ಯ ನಿಲುವನ್ನು ಕೊಂಡಾಡುತ್ತಾರೆ.

ಗುರು ಬಸವಣ್ಣನವರು ಹುಟ್ಟಿದ ದಿನವನ್ನು ಬಸವ ಜಯಂತಿ ಎಂದು ಆಚರಿಸುತ್ತೇವೆ. ಜೈನರಿಗೆ ಮಹಾವೀರ ಜಯಂತಿ, ಬೌದ್ಧರಿಗೆ ಬುದ್ಧ ಜಯಂತಿ, ಸಿಖ್ಖರಿಗೆ ಗುರುನಾನಕ ಜಯಂತಿ, ಕ್ರೈಸ್ತರಿಗೆ ಕ್ರಿಸ್‌ಮಸ್ (ಯೇಸು ಜಯಂತಿ) ಎಷ್ಟು ಮುಖ್ಯವೋ, ಎಷ್ಟು ಸಂಭ್ರಮದ ದಿನವೋ, ನಮಗೂ ಬಸವ ಜಯಂತಿ ಅಷ್ಟೇ ಮುಖ್ಯ ಮತ್ತು ಅಷ್ಟೇ ಸಂಭ್ರಮದ ದಿನ. ಬಸವ ಜಯಂತಿಯಂದು ಗುರು ಬಸವಣ್ಣನವರನ್ನು, ಹಾಡಿ ಕೊಂಡಾಡಿ ಅವರ ನಾಮವನ್ನು, ತತ್ವವನ್ನು ನಮ್ಮ ಮನದಲ್ಲಿ ತುಂಬಿಕೊಳ್ಳಬೇಕು. ಗುರು ಬಸವಣ್ಣನವರು ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ದಿನಾಂಕ: 30-04-1134 ರಂದು ಜನಿಸಿದರು. ತಾಯಿ ಮಾದಲಾಂಬಿಕೆ ತಂದೆ-ಮಾದರಸ, ಶೈವ ಬ್ರಾಹ್ಮಣರಾದ ಅವರು ಅಂದಿನ ಅಗ್ರಹಾರದ ಪುರ ಪ್ರಮುಖರಾಗಿದ್ದರು. ಗುರು ಬಸವಣ್ಣನವರು ಬೆಳೆದು ದೊಡ್ಡವರಾದಂತೆ ಈ ಸಮಾಜವನ್ನು ವೈಚಾರಿಕ ದೃಷ್ಟಿ ಕೋನದಿಂದ ನೋಡಲು ಆರಂಭಿಸಿದರು.

ಇಲ್ಲಿನ ಅನೇಕ ಮೂಢ ಆಚರಣೆಗಳು ಅವರ ಮನಸ್ಸಿಗೆ ನೋವನ್ನುಂಟು ಮಾಡುತ್ತಿದ್ದವು. ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುವುದು, ಹೆಣ್ಣು ಮಕ್ಕಳಿಗೆ ಯಾವುದೇ ಧಾರ್ಮಿಕ ಸಂಸ್ಕಾರ ಕೊಡದೇ ಅವಳನ್ನು ಅಮಾನುಷವಾಗಿ ನಡೆಸಿಕೊಳ್ಳುವುದು, ತನ್ನದಲ್ಲದ ತಪ್ಪಿನಿಂದ ಗಂಡನನ್ನು ಕಳೆದುಕೊಂಡ ಮಹಿಳೆಯ ತಲೆಯನ್ನು ಬೋಳಿಸಿ ಅವಳನ್ನು ವಿಕೃತವಾಗಿ ಮಾಡುವುದು, ಇಂಥ ಅನೇಕ ಆಚರಣೆಗಳನ್ನು ಬಾಲ್ಯದಲ್ಲಿಯೇ ಕಂಡು ಮನನೊಂದರು. ತಮಗೆ 8ನೆಯ ವಯಸ್ಸಿಗೆ ಉಪನಯನ ಮಾಡಿಸಿಕೊಳ್ಳಬೇಕಾಗಿ ಬಂದಾಗ, ಹೆಣ್ಣು ಗಂಡುಗಳಲ್ಲಿ ಭೇದವನ್ನು ಮಾಡುವ ಇಂಥ ಸಂಸ್ಕಾರ ನನಗೆ ಬೇಡ ಎಂದು ಕೂಡಲ ಸಂಗಮಕ್ಕೆ ಹೋಗಿ ವಿದ್ಯಾಭ್ಯಾಸವನ್ನು ಕೈಗೊಂಡರು. 21ನೇ ವಯಸ್ಸಿಗೆ ಅವರ ಹೃದಯದಲ್ಲಿ ಸ್ವತಂತ್ರವಾದ ಧರ್ಮದ ರೂಪುರೇಷೆ ಮೂಡಿನಿಂತಿತು. ದಿನಾಂಕ: 14-01-1155 ರಂದು ಗುರುಬಸವಣ್ಣನವರಿಗೆ ಪರಮಾತ್ಮನ ಸಾಕ್ಷಾತ್ಕಾರವಾಯಿತು. ಅಂದು ಗುರು ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರಾದರು. ಪರಮಾತ್ಮನ ಆದೇಶದಂತೆ ಬಸವ ಕಲ್ಯಾಣಕ್ಕೆ ಬಂದು ಕಾಯಕ ನಿರತರಾಗುತ್ತಲೇ ಲಿಂಗಾಯತ ಧರ್ಮವೆಂಬ ಮಹಾಮನೆ ಕಟ್ಟಿದರು. ಜಗ ಬದುಕಬೇಕು ಜನ ಬದುಕಬೇಕು ಎಂದು ತಿಳಿದು ಅಭೂತಪೂರ್ವ ತತ್ವವನ್ನೊಳಗೊಂಡ ಲಿಂಗಾಯತ ಧರ್ಮವನ್ನು ಕೊಟ್ಟರು. ಧರ್ಮವು ಮಾನವನ ಮೂಲಭೂತ ಅವಶ್ಯಕತೆಗಳಲ್ಲೊಂದು, ಆಹಾರವು ದೇಹದ ಹಸಿವೆಯನ್ನು ತಣಿಸಿದಂತೆ ಧರ್ಮವು ಆತ್ಮನ ಹಸಿವೆಯನ್ನು ತಣಿಸುತ್ತದೆ. ಅದಕ್ಕಾಗಿ ಧರ್ಮ ಸಂಸ್ಕಾರವು, ಹೆಣ್ಣು ಗಂಡು ಎಂಬ ಲಿಂಗ ಭೇದವಿಲ್ಲದೆ ಸಂನ್ಯಾಸಿ - ಸಂಸಾರಿ ಎಂಬ ಆಶ್ರಮ ಭೇದವಿಲ್ಲದೆ, ಮೇಲು ಕೀಳು ಎಂಬ ಜಾತಿ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಕೊಡಲ್ಪಡಬೇಕು ಎಂದು ತಿಳಿಸಿ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಸ್ತ್ರೀಯರಿಗೂ ಹಾಗೂ ಅಸ್ಪೃಶ್ಯರೆನಿಸಿಕೊಂಡ ಇತರರೆಲ್ಲರಿಗೂ ಧರ್ಮ ಸಂಸ್ಕಾರ ನೀಡಿದರು.

ಈ ದಿನ ನಾವು ಗುರು ಬಸವಣ್ಣನವರನ್ನು ಆರಾಧಿಸಬೇಕು, ಗೌರವಿಸಬೇಕು, ಪೂಜಿಸಬೇಕು. ದೇವರು ನಮಗೆ ಬದುಕು ಕೊಟ್ಟ; ಬಸವಣ್ಣನವರು ಬದುಕಲು ಕಲಿಸಿದರು. ದೇವರು ನರರನ್ನು ಸೃಷ್ಟಿ ಮಾಡಿದ ಬಸವಣ್ಣನವರು ನರರನ್ನು ಶರಣರನ್ನಾಗಿ ಮಾಡಿದರು. ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವವನೇ ಕುಲಜನು ಎನ್ನುವಂಥ ಸಾವಿರಾರು ಉಪದೇಶಗಳನ್ನು ನಮಗೆ ನೀಡಿದ್ದಾರೆ. ಗುರು ಬಸವಣ್ಣನವರು ನೀಡಿದ ತತ್ವ ಸರ್ವಕಾಲಿಕ ಹಾಗೂ ಸರ್ವಮಾನಿತವಾದುದು. ಅವರು ಪ್ರತಿಯೊಂದು ರಂಗದಲ್ಲಿಯೂ ಕ್ರಾಂತಿ (ಬದಲಾವಣೆ)ಯನ್ನು ಮಾಡಿದರು.

1. ಧಾರ್ಮಿಕ ಕ್ರಾಂತಿ	2. ಶೈಕ್ಷಣಿಕ ಕ್ರಾಂತಿ	3. ಭಕ್ತಿ ಕ್ರಾಂತಿ
4. ಸಾಮಾಜಿಕ ಕ್ರಾಂತಿ	5. ಆರ್ಥಿಕ ಕ್ರಾಂತಿ	6. ನೈತಿಕ ಕ್ರಾಂತಿ

1. ಧಾರ್ಮಿಕ ಕ್ರಾಂತಿ : ಅಂದಿನ ವೈದಿಕ ಧರ್ಮವು ಮಾನವ ಮಾನವರಲ್ಲಿ ಅಡ್ಡಗೋಡೆಯನ್ನು ನಿರ್ಮಿಸಿ. ಜಾತಿಯಿಂದ, ವೃತ್ತಿಯಿಂದ ಮನುಷ್ಯನನ್ನು ಅಳೆಯುತ್ತಿದ್ದ ಕಾಲವದು. ಕೆಳಜಾತಿಯಲ್ಲಿ ಹುಟ್ಟಿರುವುದು ಆ ವ್ಯಕ್ತಿಯ ತಪ್ಪಲ್ಲ, ತನ್ನದಲ್ಲದ ತಪ್ಪಿಗೆ ಶಿಕ್ಷೆ ಏಕೆ? ಉತ್ತಮ ಕುಲದಲ್ಲಿ ಹುಟ್ಟಿರುವುದು ತಮ್ಮ ಸಾಧನೆ, ಪರಿಶ್ರಮದಿಂದೇನಲ್ಲ. ಆದ್ದರಿಂದ ತಾನು ಮಾಡದ ಪರಿಶ್ರಮಕ್ಕೆ ರಕ್ಷೆ ಏಕೆ? ಗುರು ಬಸವಣ್ಣನವರು ಇದನ್ನು ಖಂಡಿಸಿ ಜಾತಿ ಹಾಗೂ ವೃತ್ತಿಯು ಮಾನವನನ್ನು ಅಳೆಯುವ ಸಾಧನವಲ್ಲ. ಅವನು ಆಚರಿಸುವ ಆಚಾರದಿಂದ ಅವನನ್ನು ಅಳೆಯಬೇಕು ಎಂಬುದನ್ನು ಕಲಿಸಿಕೊಟ್ಟರು. ಧರ್ಮವೆಂದರೆ ಮಡಿವಂತಿಕೆ ಎಂದು ತಿಳಿದಿದ್ದ ಅಂದಿನ ಕಾಲದಲ್ಲಿ, ಧರ್ಮವೆಂದರೆ ಜೀವಿಸುವ ಬಗೆ

(The way of life) ಆಗಬೇಕು. ಅದು ಜೀವನದಲ್ಲಿ ಹಾಸು ಹೊಕ್ಕಾಗಬೇಕು. ಮಾನವರಾದ ಪ್ರತಿಯೊಬ್ಬರಿಗೂ ಧರ್ಮಸಂಸ್ಕಾರ ಕೊಡಲೇ ಬೇಕು ಎಂದು ಸಾರಿ, ಎಲ್ಲಾ ಜಾತಿ ಮತ ಪಂಥದಿಂದ ಬಂದವರಿಗೂ ಲಿಂಗಾಯತ ಧರ್ಮದ ದೀಕ್ಷೆಯನ್ನು ನೀಡಿದರು.

2. ಶೈಕ್ಷಣಿಕ ಕ್ರಾಂತಿ : ಅಂದು ವಿದ್ಯೆಯು ಕೆಲವೇ ಕೆಲವರ ಸ್ವತ್ತಾಗಿತ್ತು. ಕಮ್ಮಾರನ ಮಗ ಕಾಸಲೇಬೇಕು, ಮಡಿವಾಳನ ಮಗ ಬಟ್ಟೆಯನ್ನೇ ತೊಳೆಯಬೇಕು, ಸಮಗಾರನ ಮಗ ಚಪ್ಪಲಿಗಳನ್ನೇ ಮಾಡಬೇಕು. ಬ್ರಾಹ್ಮಣ ಮತ್ತು ಕ್ಷತ್ರಿಯರ ಮಕ್ಕಳು ಮಾತ್ರ ವಿದ್ಯೆ ಕಲಿಯಬೇಕು ಎಂದು ನಿಯಮಗಳನ್ನು ರಚಿಸಿಕೊಂಡಿದ್ದ ಕಾಲದಲ್ಲಿ, ವಿದ್ಯೆಯು ಮನುಷ್ಯನಿಗೆ ಅರಿವಿನ ಕಣ್ಣನ್ನು ನೀಡುತ್ತದೆ ಅದು ಪ್ರತಿಯೊಬ್ಬರೂ ಕಲಿಯುವಂತಾಗಬೇಕು ಎಂದು ತಿಳಿಸಿ ಜನಸಾಮಾನ್ಯರಿಗೂ ಶಿಕ್ಷಣವನ್ನು ನೀಡಿದರು. ಅಂದು ಅನುಭಾವ ಮಂಟಪದಲ್ಲಿ ಹರಿದ ಸಾಹಿತ್ಯ ಗಂಗೆ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ನಿಂತಿದೆ.

ಸಾಧು ಸಾಧೆಲೆ ಬಸವಾ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು

ಎಂದು ಜಾನಪದ ಕವಿಗಳು ಬಸವಣ್ಣನವರನ್ನು ಕೊಂಡಾಡುತ್ತಾರೆ. ಜನಸಾಮಾನ್ಯರೂ ಓದು-ಬರಹ ಕಲಿತು ಅಜ್ಞಾನದ ಕತ್ತಲೆಯನ್ನು ತೊಲಗಿಸಿ ಕೊಂಡರು. ಇದರಿಂದ ಮರ್ತ್ಯಲೋಕಕ್ಕೆ ಹೊಸ ಬೆಳಕು ಬಂದಂತಾಯಿತು.

3. ಭಕ್ತಿ ಕ್ರಾಂತಿ : ಗುರು ಬಸವಣ್ಣನವರನ್ನು ಭಕ್ತಿ ಭಂಡಾರಿ ಎಂದು ಕರೆಯುತ್ತಾರೆ. ಕಾರಣ ಅವರು ಆ ಕ್ಷೇತ್ರದಲ್ಲಿ ಮಾಡಿದ ಬದಲಾವಣೆ. ಅಲ್ಲಿಯವರಿಗೆ ಭಕ್ತಿಯ ಉದ್ದೇಶ ದೇವರಲ್ಲಿ ಏನಾದರೂ ಬೇಡಿಕೊಳ್ಳುವುದು ಅಥವಾ ಇಲ್ಲಿಯವರೆಗೆ ಮಾಡಿದ ಪಾಪ ಕರ್ಮಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕಾಗಿ ಗುಡಿ ಗುಂಡಾರಗಳಿಗೆ ಅಲೆಯುವುದಾಗಿತ್ತು. ಅದರಲ್ಲೂ ಕೆಳ ವರ್ಗದವರೆನಿಸಿಕೊಂಡವರಿಗೆ ಭಕ್ತಿ ಮಾಡುವ ಹಕ್ಕು ಇರಲಿಲ್ಲ. ಕಾರಣ ಭಕ್ತಿಯ ಕೇಂದ್ರಗಳು ಗುಡಿ ಗುಂಡಾರಗಳಾಗಿದ್ದವು. ಪುರೋಹಿತಶಾಹಿಯ ಕಪಿಮುಷ್ಠಿಯಲ್ಲಿ ಬಂಧಿತವಾಗಿದ್ದ ಜನ ಸಾಮಾನ್ಯರು ತತ್ತರಿಸಿ ಹೋಗಿದ್ದರು. ಪುರೋಹಿತರು ಹೇಳಿದ್ದೇ ಶಾಸ್ತ್ರವಾಗಿತ್ತು. ದೇವರು ಮತ್ತು ಭಕ್ತನ ನಡುವೆ ಪೂಜಾರಿಯ ಮಧ್ಯಸ್ತಿಕೆ ಇತ್ತು. ಗುರುಬಸವಣ್ಣನವರು ಭಕ್ತಿಯು ಅಂತರಂಗದಲ್ಲಿ ಭಾವನೆಯನ್ನು ಅರಳಿಸಬೇಕು ಅದು ಪರಮಾತ್ಮನನ್ನು ಅರಿಯಲು ಸಹಕಾರಿಯಾಗಬೇಕು. ಭಕ್ತಿಯಿಂದ ಮಾನವನ ಸರ್ವಾಂಗೀಣ ಅಭಿವೃದ್ಧಿಯಾಗಬೇಕು ಎಂದು ತಿಳಿಸಿದರು. ಭಕ್ತ ಮತ್ತು ದೇವರ ನಡುವೆ ಪೂಜಾರಿಯ ಮಧ್ಯಸ್ತಿಕೆಯನ್ನು ತಪ್ಪಿಸುವಂಥ ಸಾಧನವಾದ ಇಷ್ಟಲಿಂಗವನ್ನು ದಯಪಾಲಿಸಿದರು. ಯಾವುದೇ ಖರ್ಚಿಲ್ಲದೆ, ಯಾರದೇ ಹಂಗಿಲ್ಲದೆ, ಯಾವುದೇ ಸಮಯದ ನಿರ್ಬಂಧವಿಲ್ಲದೆ ಭಕ್ತನು ಬೇಕೆನಿಸಿದಾಗಲೆಲ್ಲಾ ಇಷ್ಟಲಿಂಗವನ್ನು ಅರ್ಚಿಸಿ ಆನಂದವನ್ನು ಹೊಂದುವಂತೆ ಮಾಡಿದರು.

ಗುರುಬಸವಣ್ಣನವರ ನಂತರ ಬಂದ ಅನೇಕ ಸಮಾಜ ಸುಧಾರಕರು ಈ ಸಮಾಜದಲ್ಲಿರುವ ಲೋಪದೋಷಗಳನ್ನು ಗುರುತಿಸಿದರೇ ಹೊರತು, ಆ ಸಮಸ್ಯೆಯನ್ನು ಪರಿಹರಿಸಲು ಮಾರ್ಗವಾಗಲೀ ಸಾಧನವಾಗಲೀ ಕೊಡಲಿಲ್ಲ. ಆದರೆ ಗುರು ಬಸವಣ್ಣನವರು ಒಂದು ಸಮಸ್ಯೆಯನ್ನು ಗುರುತಿಸಿ, ಅದನ್ನು ಪರಿಹರಿಸುವ ಸಾಧನವನ್ನು ಕೊಟ್ಟು, ಮಾರ್ಗವನ್ನೂ ತೋರಿದರು.

ಉಳ್ಳವರು ಶಿವಾಲಯವ ಮಾಡುವರು,
ನಾನೇನ ಮಾಡಲಿ ಬಡವನಯ್ಯಾ?
ಎನ್ನ ಕಾಲೆ ಕಂಬ; ದೇಹವೇ ದೇಗುಲ,
ಶಿರವೇ ಹೊನ್ನ ಕಳಶವಯ್ಯ; ಲಿಂಗದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

ಗುರುಬಸವಣ್ಣನವರೇನು ಆರ್ಥಿಕವಾಗಿ ಬಡವರಿರಲಿಲ್ಲ; ಆದರೆ ಬಡವರಿಗೆ ಧ್ವನಿಯಾಗಿ ಅವರ ಪ್ರತಿನಿಧಿಯಾಗಿ ಈ ವಚನವನ್ನು ಹೇಳುತ್ತಾರೆ. ನೀನು ಹುಡುಕಿಕೊಂಡು ಹೋಗುವ ದೇವರು ಬೇಡ, ಸದಾ ನಿನ್ನೊಂದಿಗೆ ಇರುವ ದೇವರನ್ನು ಕೊಡುತ್ತೇನೆ ಎಂದು ಇಷ್ಟಲಿಂಗವನ್ನು ಕೊಟ್ಟರು. ಅಂತರಂಗದಲ್ಲಿ ಅರಿವನ್ನು ಬಹಿರಂಗದಲ್ಲಿ ಆಚರಣೆಯನ್ನು ತುಂಬಿಕೊಳ್ಳುವುದೇ ಭಕ್ತಿಯ ಉದ್ದೇಶ ಎಂದರುಹಿದರು.

4. ಸಾಮಾಜಿಕ ಕ್ರಾಂತಿ : ಅಂದು ಹೆಣ್ಣು ಮಕ್ಕಳ ಪರಿಸ್ಥಿತಿ ಸಾಮಾಜಿಕವಾಗಿ ಕೆಳಸ್ತರದಲ್ಲಿತ್ತು. ಹೆಣ್ಣನ್ನು ಶೂದ್ರಳೆಂದು ಕರೆದು ಧರ್ಮ ಸಂಸ್ಕಾರ ಹಾಗೂ ಶಿಕ್ಷಣದಿಂದ ವಂಚಿಸಲಾಗಿತ್ತು. ಪುರುಷನ ಅವಿಭಾಜ್ಯ ಅಂಗವಾದ ಹೆಣ್ಣು ಹೇಗೆ ಕೀಳಾಗಬಲ್ಲಳು? ಎಂದು ಪ್ರಶ್ನಿಸಿ ಅವಳ ಆತ್ಮ ತೃಪ್ತಿಯೂ ಆಗಬೇಕು ಎಂದು ಸಾರಿ ಮೊಟ್ಟ ಮೊದಲ ಬಾರಿಗೆ ಹೆಣ್ಣು ಮಕ್ಕಳಿಗೂ ಧರ್ಮಸಂಸ್ಕಾರವನ್ನು ನೀಡಿದರು. ಅಂದು ಗಂಡ ಸತ್ತ ಮಹಿಳೆಗೆ ಮರು ಮದುವೆಯಾಗುವ ಅವಕಾಶಗಳಿರಲಿಲ್ಲ. ಹೆಂಡತಿ ಸತ್ತ ಪುರುಷನು ಮರುವಿವಾಹವಾಗುತ್ತಾನೆ. ಅದೇ ರೀತಿ ಗಂಡ ಸತ್ತ ಮಹಿಳೆ ಏಕೆ ಮರುವಿವಾಹವಾಗ ಬಾರದು ಎಂದು ಪ್ರಶ್ನಿಸಿ ವಿಧವೆಯರ ಪುನರ್ವಿವಾಹವನ್ನು ಜಾರಿಗೆ ತಂದರು.

5. ಆರ್ಥಿಕ ಕ್ರಾಂತಿ : ಕೇವಲ ಪೂಜೆಯೊಂದೇ ದೇವರನ್ನೊಲಿಸುವ ಸಾಧನವೆಂದು ನಂಬಿದ್ದ ಕಾಲದಲ್ಲಿ, ದುಡಿಮೆಯೂ ದೇವರನ್ನೊಲಿಸುವ ಸಾಧನವೆಂದು ತೋರಿಸಿ ಕೊಟ್ಟವರು ಗುರು ಬಸವಣ್ಣನವರು. **'ಕಾಯಕವೇ ಕೈಲಾಸ'** ಎಂದು ಸಾರಿ, ಕಾಯಕವೂ ದೇವನನ್ನೊಲಿಸುವ ಸಾಧನವೆಂದು. ದುಡಿಮೆಗೆ ದೈವತ್ವವನ್ನು ತಂದುಕೊಟ್ಟರು. ರೈತನು ಅನ್ನ ಕೊಡದಿದ್ದರೆ, ರಾಜನ ವೈಭವ, ಪೂಜಾರಿಗಳ ಪೂಜೆ ಹೇಗೆ ನಡೆದೀತು? ''ಸತ್ತುದನೆಳೆಯುವನು ಎತ್ತಣ ಹೊಲೆಯ? ಹೊತ್ತು ತಂದು ನೀವು ಕೊಲುವಿರಿ'' ಎಂದು, ಯಾರನ್ನು ನೀವು ಮಾದಿಗರೆನ್ನುವಿರೊ ಅವರು ಬಂದು ಸತ್ತುದನ್ನು ಎಳೆಯದೇ ಹೋದರೆ, ದುರ್ವಾಸನೆ ಬಂದು ಅಲ್ಲಿ ಯಾರೂ ಬದುಕಲಿಕ್ಕಾಗದು. ಅದಕ್ಕಾಗಿ ಸತ್ತುದನ್ನು ಎಳೆದು ಊರನ್ನು ಸ್ವಚ್ಛವಾಗಿಡುವುದೂ ಪವಿತ್ರ ಕಾಯಕವೇ ಎಂದು ಸಾರಿ 'ಹೊಲೆ' ಎನ್ನುವ ಶಬ್ದಕ್ಕೆ ಹೊಸ ವ್ಯಾಖ್ಯಾನವನ್ನು ಬರೆದರು. ಅಹಿಂಸೆ, ಕ್ಷಮೆ, ದಯೆ, ಕರುಣೆ, ಶಾಂತಿ ಇವು ಗುರು ಬಸವಣ್ಣನವರ ಕ್ರಾಂತಿಯ ಫಲಗಳು.

6. ನೈತಿಕ ಕ್ರಾಂತಿ : ಗುರು ಬಸವಣ್ಣನವರು ಕಲಿಸುವಷ್ಟು ನೈತಿಕ ಪ್ರಜ್ಞೆಯನ್ನು ಮತ್ತಾರೂ ಕಲಿಸುವುದಿಲ್ಲ. ನಡೆ, ನುಡಿ, ವ್ಯವಹಾರ, ಉಣ್ಣುವುದು ಉಡುವುದು ಪ್ರತಿಯೊಂದನ್ನು ಕಲಿಸುತ್ತಾರೆ.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮವೊಂದೆ ಎಂಬ

ಛಲಬೇಕು ಶರಣಂಗೆ ಪರವಾದಿ ನಿಗ್ರಹದಲ್ಲಿ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ನಮ್ಮ ಲಿಂಗದೇವಾ. ಬ.ವ.ದೀ.-675)

ಮನುಷ್ಯನ ನೈತಿಕ ಪತನಕ್ಕೆ ಕಾರಣವಾಗುವ ಮೂರು ಮುಖ್ಯ ಅಂಶಗಳನ್ನು ಗುರು ಬಸವಣ್ಣನವರು ಗುರುತಿಸುತ್ತಾರೆ. 1. ಪರಧನ, 2. ಪರಸತಿ, 3. ಪರದೈವ. ಅದಕ್ಕಾಗಿ ಧರ್ಮ ಮಾರ್ಗದಲ್ಲಿ ನಡೆಯ ಬೇಕೆನ್ನುವವರು ಇವು ಮೂರರಿಂದಲೂ ದೂರವಿರಬೇಕು.


ಗುರು ಬಸವಣ್ಣನವರ ಇಂಥ ಸಮಗ್ರ ಕ್ರಾಂತಿಯನ್ನು ನೋಡಿಯೇ ಮಹಾತ್ಮ ಗಾಂಧೀಜಿಯವರು ಅಚ್ಚರಿ ಪಟ್ಟಿದ್ದಾರೆ! 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರಿಗೆ ಕನ್ನಡದ ಜನತೆಗೆ ನಿಮ್ಮ ಸಂದೇಶವೇನು ಎಂದು ಕೇಳಿದಾಗ ಅವರು ಹೇಳಿದ ಮಾತುಗಳಿವು. "ನಿಮಗೆ ನಾನಾವ ಸಂದೇಶ ನೀಡಬಲ್ಲೆ? ಇಡೀ ವಿಶ್ವಕ್ಕೆ ಸಂದೇಶ ನೀಡಿದ ಗುರುಬಸವಣ್ಣನವರು ನಿಮ್ಮ ನಾಡಿನಲ್ಲೇ ಹುಟ್ಟಿದ್ದಾರೆ. ಗುರುಬಸವಣ್ಣನವರು ಸಿದ್ಧ ಪುರುಷರು. ನಾನು ಸಾಧಕ ಸ್ಥಿತಿಯಲ್ಲಿದ್ದೇನೆ ಅವರು ಹೇಳಿದ ಎಲ್ಲಾ ತತ್ವಗಳನ್ನು ಆಚರಿಸಲಿಕ್ಕೆ ನನ್ನಿಂದ ಸಾಧ್ಯವಾಗಿಲ್ಲ. ಕೇವಲ ಅಸ್ಪೃಶ್ಯತೆಯ ನಿವಾರಣೆ ಮತ್ತು ಕಾರ್ಮಿಕರ ಹಿತಾಸಕ್ತಿಯನ್ನು ಎತ್ತಿಹಿಡಿಯಲು ಶ್ರಮಿಸುತ್ತಿದ್ದೇನೆ. ಒಂದು ವೇಳೆ ಅವರು ಈ ಕಾಲದಲ್ಲಿ ಬದುಕಿದ್ದರೆ ಜಗತ್ತಿಗೇ ಪೂಜ್ಯ ವ್ಯಕ್ತಿಯಾಗುತ್ತಿದ್ದರು. ಗುರುಬಸವಣ್ಣನವರ ಅನುಯಾಯಿಗಳಾದ ನೀವು ಅವರ ಎಲ್ಲಾ ತತ್ವವನ್ನು ಆಚರಣೆಗೆ ತಂದರೆ ಭಾರತವನ್ನೇಕೆ ಇಡೀ ವಿಶ್ವವನ್ನೇ ಉದ್ಧರಿಸಬಲ್ಲಿರಿ" ಎಂದು ನುಡಿದರು.

ಗುರು ಬಸವಣ್ಣನವರಂಥ ವ್ಯಕ್ತಿ ಈ ಭೂಮಿಯ ಮೇಲೆ ಬದುಕಿದ್ದುದ್ದೇ ಒಂದು ಪರಮಾಶ್ಚರ್ಯ. ಇದನ್ನರಿತೇ ಅಲ್ಲಮ ಪ್ರಭುದೇವರು, ದೇವರಲ್ಲಿ **"ಬಸವಣ್ಣನಾಗಿ ಹುಟ್ಟಿಸದೆ ಪ್ರಭುವಾಗಿ ಏಕೆ ಹುಟ್ಟಿಸಿದೆ?"** ಎಂದು ಕೇಳುತ್ತಾರೆ. **"ದೇವನಾಗಬಹುದು ಆದರೆ ಬಸವಣ್ಣನವರಾಗಲಿಕ್ಕೆ ಸಾಧ್ಯವಿಲ್ಲ"** ಎನ್ನುತ್ತಾರೆ ಮಡಿವಾಳ ಮಾಚಿದೇವರು. ಇಂಥ ಪರಿಪೂರ್ಣ ವ್ಯಕ್ತಿತ್ವ ಹೊಂದಿದ ಧರ್ಮ ಗುರು ನೀಡಿದ ಧರ್ಮದ ಅನುಯಾಯಿಗಳು ನಾವಾಗಿರುವುದರಿಂದ ಹೆಮ್ಮೆ ಪಡಬೇಕು. ಗುರುಬಸವಣ್ಣನವರನ್ನು, ನಮ್ಮ ಉಸಿರಾಗಿ, ಅವರ ಸಂದೇಶಗಳನ್ನು ನಮ್ಮ ಜೀವನದ ಹಾಸು ಹೊಕ್ಕಾಗಿ ಮಾಡಿಕೊಳ್ಳಬೇಕು. ಗುರುಬಸವಣ್ಣನವರ ಸಂದೇಶಗಳನ್ನು ನಮ್ಮಿಂದ ಸಾಧ್ಯವಾದಷ್ಟು ಇತರರಿಗೆ ತಿಳಿಸುವ ಸಂಕಲ್ಪ ತಾಳಿ, ಆ ಮೂಲಕವಾಗಿ ಶಾಂತಿ ಸಮಾಧಾನ, ನೆಮ್ಮದಿಗಳು ನೆಲೆಗೊಳ್ಳುವಂತೆ ಮಾಡಿ, ಈ ಮರ್ತ್ಯಲೋಕವನ್ನು ಸುಂದರಗೊಳಿಸೋಣ. ಗುರುಬಸವಣ್ಣನವರ ಮೆಚ್ಚುಗೆಯ ಮಕ್ಕಳಾಗೋಣ.


- ಸಚ್ಚಿದಾನಂದ ಚಟನಳ್ಳಿ

ಕಲ್ಯಾಣ ಕಿರಣ ಚಂದಾದಾರರಲ್ಲಿ ಮನವಿ


ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 - 150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ವಿಳಾಸ ಮತ್ತು ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಲು ಕೋರುತ್ತೇವೆ. **ದೂರವಾಣಿಗಳ ಸಂಖ್ಯೆಗಳು : 9620058492, 9481249857**



ಪೂಜ್ಯ ಮಾತಾಜಿಯವರ ವರ್ಧಂತಿಯಂದು ಶರಣ ಕೃಷ್ಣಪ್ಪನವರಿಂದ ಧ್ವಜಾರೋಹಣ



ಪೂಜ್ಯ ಮಾತಾಜಿಯವರ ವರ್ಧಂತಿಯಂದು ಸಾಮೂಹಿಕ ಪ್ರಾರ್ಥನೆ




ಅಲ್ಲಮಪ್ರಭು ಪೀಠವನ್ನಲಂಕರಿಸಿದ ಜಗದ್ಗುರು ಬಸವಕುಮಾರ ಸ್ವಾಮೀಜಿಯವರಿಗೆ ಆರತಿ



ಸಾಮೂಹಿಕ ಪ್ರಾರ್ಥನೆ



ಪೂಜ್ಯ ಮಾತಾಜಿಯವರಿಗೆ ಅಭಿನಂದನೆ ಸಲ್ಲಿಸಲು ಆಗಮಿಸಿದ ಶರಣ ಸಮೂಹ



ಲಿಂ.ಶರಣ.ಸುಭಾಷ್ ಪಾಟೀಲ್

[illegible] ದಿ.13-04-2009 ರಂದು [illegible] ದಿ.15-4-2009 ರಂದು [illegible]



...ದ ಲಿಂಗಾಯತ ಗಣಮೇಳವನ್ನು ಉದ್ಘಾಟಿಸಿ ಮಾತನಾಡುತ್ತಿರುವ ಸಂಸದೆ ನಿವೇದಿತಾ ಮಾನೆ ಮತ್ತು ಗಣ್ಯರು









... ಮಾತಾಜಿಯವರ 64ನೇ ವರ್ಧಂತಿ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಿದ ಶರಣ ಗಂಗಾಶೆಟ್ಟಿ ಪಾಟೀಲ್, ಕೃಷ್ಣಪ್ಪನವರು, ಬಸವಕುಮಾರ ಸ್ವಾಮೀಜಿ ಡಾ॥ವಿಜಯಲಕ್ಷ್ಮಿ, ಬಾಳೆಕುಂದ್ರಿ, ಮತ್ತು ಡಾ॥ಭೋಜಮ್ಮ